ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 4 । ಸಂಚಿಕೆ : 6 । ಜೂನ್ 2022 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



## ಜೂನ್ 5

## ವಿಶ್ವ ಪರಿಸರ ದಿನ

### ಧ್ಯೇಯ : ಒಂದೇ ಭೂಮಿ







# ಕಟ್ಟಡ ದೇಣಿಗೆಯ ಚೆಕ್ ಸಲ್ಲಿಕೆ



ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ, ಬೆಂಗಳೂರು ಈ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎನ್. ಕೃಷ್ಣಪ್ಪ ಮತ್ತು ಕಾರ್ಯದರ್ಶಿಯವರು ಪತ್ತಿನ ಸಹಕಾರ ಮಹಾಮಂಡಳಕ್ಕೆ ಕಟ್ಟಡ ದೇಣಿಗೆಯ ಚೆಕ್ಕನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡ ಮತ್ತು ನಿರ್ದೇಶಕರಾದ ಶ್ರೀ ಡಿ.ಚನ್ನಯ್ಯರವರಿಗೆ ನೀಡಿದರು.



ಜನಹಿತ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮಹಾಲಕ್ಷ್ಮೀಪುರ, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್‌ರವರು ಪತ್ತಿನ ಸಹಕಾರ ಮಹಾಮಂಡಳಕ್ಕೆ ಕಟ್ಟಡದೇಣಿಗೆಯ ಚೆಕ್ಕನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರಿಗೆ ನೀಡಿದರು. ಸಂಘದ ಆಡಳಿತಮಂಡಳಿ ನಿರ್ದೇಶಕರು ಮತ್ತು ಕಾರ್ಯದರ್ಶಿಯವರು ಉಪಸ್ಥಿತರಿದ್ದರು.

# ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಆಡಳಿತ ಕಛೇರಿಯ ಕಟ್ಟಡದ ಕಾಮಗಾರಿ ವೀಕ್ಷಣೆ






ಬೆಂಗಳೂರಿನಲ್ಲಿ ಪತ್ತಿನ ಸಹಕಾರ ಮಹಾಮಂಡಳ ನಿರ್ಮಾಣ ಮಾಡುತ್ತಿರುವ ಆಡಳಿತ ಕಛೇರಿಯ ಕಟ್ಟಡದ ಕಾಮಗಾರಿಯನ್ನು ಇತ್ತೀಚೆಗೆ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡ, ನಿರ್ದೇಶಕರುಗಳಾದ ಶ್ರೀ ಸಂಜಯ ಪಿ ಹೊಸಮಠ, ಶ್ರೀ ವಿ.ರಾಜು ಮತ್ತು ಶ್ರೀ ಧರೇಪ್ಪ ಮಹದೇವ ಆಲಗೂರರವರು ವೀಕ್ಷಣೆ ಮಾಡಿದರು.



## ಜಾಹಿರಾತು ಮನವಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988,

ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org

ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– ಸಂಪಾದಕರು

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ಕರ್ನಾಟಕ ರಾಜ್ಯದಲ್ಲಿ ಅಂದಾಜು 5000 ಪತ್ತಿನ ಸಹಕಾರ ಸಂಘಗಳ ಸದಸ್ಯ ಸೇವೆ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ವ್ಯಾಪಕವಾಗಿದ್ದರೂ ಸ್ಪರ್ಧಾತ್ಮಕ ಪರಿಸರದಲ್ಲಿ ಮತ್ತಷ್ಟು ಆರ್ಥಿಕ ಸಧೃಡತೆಯನ್ನು ಬೆಳೆಸಿಕೊಳ್ಳಬೇಕಿದೆ. ವಿಶ್ವದ ಹಲವು ಪ್ರಮುಖ ರಾಷ್ಟ್ರಗಳು ಬ್ಯಾಂಕಿಂಗ್ ಹಣಕಾಸು ವ್ಯವಸ್ಥೆಯಲ್ಲಿ ಏರಿಳಿತ ಕಂಡರೂ ಸಹಕಾರ ಚಳುವಳಿ ಹೆಚ್ಚು ಭಾರತದಂತಹ ಕ್ರಿಯಾಶೀಲವಾಗಿರುವಂತಹ ರಾಷ್ಟ್ರಗಳಲ್ಲಿ ಸಧೃಡವಾಗಿತ್ತು. ಇದರಿಂದ ಚಳವಳಿ ಮತ್ತಷ್ಟು ಗಟ್ಟಿಗೊಳ್ಳುತ್ತಾ ಸದಸ್ಯರಿಗೆ ಸೇವೆಗಳನ್ನು ಒದಗಿಸುತ್ತಾ ಬಂದಿದೆ. ಆದರೂ ರಾಜ್ಯದ ಪತ್ತಿನ ಸಹಕಾರ ಸಂಘಗಳಲ್ಲಿನ ಸದಸ್ಯತ್ವವನ್ನು ಗಮನಿಸಿದಾಗ ಪತ್ತಿನ ಸಹಕಾರ ಚಳುವಳಿಯನ್ನು ಮತ್ತಷ್ಟು ಬಲಪಡಿಸಬೇಕಾದ ಅನಿವಾರ್ಯತೆ, ಅಗತ್ಯತೆಯೂ ಇದೆ.

# ಪತ್ತಿನ ಸಹಕಾರ ಸಂಘಗಳ ಆರ್ಥಿಕ ಸಧೃಡತೆ ಗಮನ ಹರಿಸುವ ಅಗತ್ಯವಿದೆ



ಭಾರತದ ಸಹಕಾರ ಚಳುವಳಿಗೆ 118 ವರ್ಷಗಳು. ಪತ್ತಿನ ಸಹಕಾರ ಚಳವಳಿ ಆರ್ಥಿಕವಾಗಿ ಸಧೃಡವಾಗುತ್ತಿದೆ. ಸಹಕಾರ ವಲಯದಲ್ಲಿ ಪತ್ತಿನ ಸಹಕಾರ ಸಂಘಗಳು ಪಟ್ಟಣ ಸಹಕಾರ ಬ್ಯಾಂಕುಗಳ ಮಾದರಿಯಲ್ಲಿಯೇ ಸಮಾನಂತರವಾಗಿ ಸದಸ್ಯರಿಗೆ ಆರ್ಥಿಕ ನೆರವು ನೀಡಿ ಅವರ ಆರ್ಥಿಕ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಸ್ವಾವಲಂಬಿ ಜೀವನಕ್ಕೆ ನೆರವಾಗುತ್ತಿವೆ.

ಕರ್ನಾಟಕ ರಾಜ್ಯದಲ್ಲಿ ಅಂದಾಜು 5000 ಪತ್ತಿನ ಸಹಕಾರ ಸಂಘಗಳ ಸದಸ್ಯ ಸೇವೆ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ವ್ಯಾಪಕವಾಗಿದ್ದರೂ ಸ್ಪರ್ಧಾತ್ಮಕ ಪರಿಸರದಲ್ಲಿ ಮತ್ತಷ್ಟು ಆರ್ಥಿಕ ಸಧೃಡತೆಯನ್ನು ಬೆಳೆಸಿಕೊಳ್ಳಬೇಕಿದೆ. ವಿಶ್ವದ ಹಲವು ಪ್ರಮುಖ ರಾಷ್ಟ್ರಗಳು ಬ್ಯಾಂಕಿಂಗ್ ಹಣಕಾಸು ವ್ಯವಸ್ಥೆಯಲ್ಲಿ ಏರಿಳಿತ ಕಂಡರೂ ಸಹಕಾರ ಚಳುವಳಿ ಭಾರತದಂತಹ ಹೆಚ್ಚು ಕ್ರಿಯಾಶೀಲವಾಗಿರುವಂತಹ ರಾಷ್ಟ್ರಗಳಲ್ಲಿ ಸಧೃಡವಾಗಿತ್ತು. ಇದರಿಂದ ಚಳವಳಿ ಮತ್ತಷ್ಟು ಗಟ್ಟಿಗೊಳ್ಳುತ್ತಾ ಸದಸ್ಯರಿಗೆ ಸೇವೆಗಳನ್ನು ಒದಗಿಸುತ್ತಾ ಬಂದಿದೆ. ಆದರೂ ರಾಜ್ಯದ ಪತ್ತಿನ ಸಹಕಾರ ಸಂಘಗಳಲ್ಲಿನ ಸದಸ್ಯತ್ವವನ್ನು ಗಮನಿಸಿದಾಗ ಪತ್ತಿನ ಸಹಕಾರ ಚಳುವಳಿಯನ್ನು ಮತ್ತಷ್ಟು ಬಲಪಡಿಸಬೇಕಾದ ಅನಿವಾರ್ಯತೆ, ಅಗತ್ಯತೆಯೂ ಇದೆ.

ಕಾಲಮಾನಕ್ಕೆ ತಕ್ಕಂತೆ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು, ವೆಚ್ಚಗಳನ್ನು ನಿಭಾಯಿಸಲು ಹಾಗೂ ಮುನ್ನಡೆಯಲು ಸದಸ್ಯರಿಂದ ಷೇರು ಮತ್ತು ಠೇವುಗಳ ಸಂಗ್ರಹ ಸದಸ್ಯ–ಗ್ರಾಹಕ ಚಟುವಟಿಕೆಗಳು ಹೆಚ್ಚಿಸುವುದಲ್ಲದೇ ಹೆಚ್ಚು ಸಾಲಸೌಲಭ್ಯಗಳನ್ನು ಕಲ್ಪಿಸಿ ಸದಸ್ಯರ ಬೇಡಿಕೆಗೆ ತಕ್ಕ ಹಾಗೆ ಸೇವೆಗಳನ್ನು ನೀಡಬಹುದಾಗಿದೆ. ಆಡಳಿಮಂಡಳಿಗಳ ಬದ್ದತೆಯುಳ್ಳ ಮಾರ್ಗದರ್ಶನದೊಂದಿಗೆ. ವೃತ್ತಿಪರ ಸಿಬ್ಬಂದಿಗಳು, ತಂತ್ರಜ್ಞಾನ ಅಳವಡಿಕೆಯ ಜೊತೆಗೆ ಸದಸ್ಯರಲ್ಲಿ ಸಹಕಾರ ಚಳುವಳಿಯ ಬಗ್ಗೆ ಆಗಾಗ್ಗೆ ಜಾಗೃತಿ ಮೂಡಿಸಿ ಸದಸ್ಯರು ನಿರಂತರವಾಗಿ ಸಹಕಾರ ಸಂಘಗಳಲ್ಲಿ ವ್ಯವಹರಿಸುವಂತೆ ಕ್ರಮಕೈಗೊಳ್ಳಬೇಕಾಗುತ್ತದೆ. ಇದರಿಂದ ಸದಸ್ಯರಲ್ಲಿ ಸಂಘಗಳ ಮೇಲೆ ವಿಶ್ವಾಸ, ನಂಬಿಕೆ ಹೆಚ್ಚಾಗಿ ಸಂಘಗಳು ಬದ್ದತೆ, ಕಾರ್ಯದಕ್ಷತೆಯೊಂದಿಗೆ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಂಘಗಳು ಬಂಡವಾಳ ಕ್ರೋಡೀಕರಣದ ಮೂಲಕ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಾಗಲಿ ಎಂದು ಆಶಿಸುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ನೂರರ ನೋಟಿಗೇ ಹೆಚ್ಚು ಬೇಡಿಕೆ! 2000 ರೂ. ನೋಟಿಗೆ ಇಲ್ಲ ಆದ್ಯತೆ

**ನವದೆಹಲಿ :** ಭಾರತದಲ್ಲಿ 2000, 500, 200, 100 ಹೀಗೆ ಹಲವು ಮುಖಬೆಲೆಯ ನೋಟುಗಳಿವೆಯಾದರೂ ಅದರಲ್ಲಿ ಭಾರತೀಯರ ಆದ್ಯತೆ 100 ರೂ. ಮುಖಬೆಲೆಯ ನೋಟೇ ಆಗಿದೆ.

ಈ ಅಂಶವು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಬಿಡುಗಡೆ ಮಾಡಿರುವ ವರದಿಯಿಂದ ತಿಳಿದುಬಂದಿದೆ.

ವರದಿಯ ಪ್ರಕಾರ, ದೇಶದಲ್ಲಿ ಮೊದಲ ಪ್ರಾಮುಖ್ಯತೆ 100 ರೂ. ನೋಟಿಗಿದ್ದರೆ ಕೊನೆಯ ಆದ್ಯತೆ 2000 ರೂ. ಮುಖಬೆಲೆಯ ನೋಟಿಗಿದೆ. ಆದರೆ ಅತಿ ಹೆಚ್ಚು ಬಳಕೆಯಲ್ಲಿರುವುದು 500 ರೂ. ಮುಖಬೆಲೆಯ ನೋಟುಗಳು. ಹಾಗೆಯೇ ನಾಣ್ಯಗಳ ವಿಚಾರಕ್ಕೆ ಬಂದರೆ ಜನರಿಗೆ 5 ರೂ. ಮುಖಬೆಲೆಯ ನಾಣ್ಯ ಮೊದಲ ಆದ್ಯತೆಯಲ್ಲಿದ್ದರೆ 1 ರೂ. ಮುಖಬೆಲೆಯ ನಾಣ್ಯ ಕೊನೆಯ ಆದ್ಯತೆಯಲ್ಲಿದೆ.

**ಬೇಡಿಕೆ ಇಳಿಕೆ :** ದೇಶಾದ್ಯಂತ ಡಿಜಿಟಲ್ ಪಾವತಿ ಹೆಚ್ಚಾದ ಹಿನ್ನೆಲೆಯಲ್ಲಿ, ಭಾರತದಲ್ಲಿ ನೋಟುಗಳ ಬೇಡಿಕೆಯು 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ಶೇ.1.8 ಇಳಿಕೆ ಕಂಡಿದೆ. ನಾಣ್ಯಗಳ ಬೇಡಿಕೆಯಲ್ಲಂತೂ ಶೇ.73.3 ಇಳಿದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.



**ಶ್ರೇಣೀಕೃತ ವಿಧಾನ ಅಳವಡಿಕೆ :** ಡಿಜಿಟಲ್ ಕರೆನ್ಸಿ ವ್ಯವಸ್ಥೆಯ ಜಾರಿಗಾಗಿ ಶ್ರೇಣೀಕೃತ ವಿಧಾನವನ್ನು ಅಳವಡಿಸಿಕೊಂಡಿರುವುದಾಗಿ ಆರ್‌ಬಿಐ ಹೇಳಿದೆ. ಡಿಜಿಟಲ್ ಕರೆನ್ಸಿಯ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡಲಾಗುತ್ತಿದ್ದು, ಎಲ್ಲೆಡೆಯೂ ಸುಗಮ ವ್ಯವಸ್ಥೆ ಕಲ್ಪಿಸುವುದು, ಎಲ್ಲೂ ತೊಂದರೆಯಾಗದಂಥ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

**ಸುಭಾಷಿತ :** ಅಡುಗೆ ಹಾಳಾದರೆ ಒಂದು ದಿನ ನಷ್ಟ, ಬೆಳೆ ಹಾಳಾದರೆ ಒಂದು ವರ್ಷವೇ ನಷ್ಟ;
ಆದರೆ, ವಿದ್ಯಾಭ್ಯಾಸ ಹಾಳಾದರೆ ಇಡೀ ಬದುಕೇ ನಷ್ಟ, ಜ್ಞಾನ ಹೆಚ್ಚಿಸಿಕೊಂಡರಷ್ಟೇ ನಮಗೆ ಬೆಲೆ – ಅಬ್ದುಲ್ ಕಲಾಂ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು “ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು” ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸ್ಪೇನ್‌ನಲ್ಲಿ "ಫಿಮಾ ಅಗ್ರಿಕೋಲ" ಅಂತಾರಾಷ್ಟ್ರೀಯ ಕೃಷಿ ವಸ್ತು ಪ್ರದರ್ಶನ

## ರಾಜ್ಯದಲ್ಲಿ ಬಂಡವಾಳ ಹೂಡಲು ವಿದೇಶಿ ಕೃಷಿ ಉತ್ಪನ್ನ, ಯಂತ್ರೋಪಕರಣಗಳ ಕಂಪನಿಗಳಿಗೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಂದ ಆಹ್ವಾನ





**ಸ್ಪೇನ್ :** ದೇಶದ ಫೆರಿಯಾ ಡೆ ಝುರಗೋಜದಲ್ಲಿ 42ನೇ ದ್ವೈವಾರ್ಷಿಕ "ಫಿಮಾ ಅಗ್ರಿಕೋಲ 2022" ಅಂತಾರಾಷ್ಟ್ರೀಯ ಕೃಷಿ ವಸ್ತು ಪ್ರದರ್ಶನವು ಏಪ್ರಿಲ್ 26 ರಿಂದ ಏಪ್ರಿಲ್ 30 ರವರೆಗೆ ಯಶಸ್ವಿಯಾಗಿ ನಡೆಯಿತು.

2030ರ ವೇಳೆಗೆ ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾಗಲಿವೆ. ವಿವಿಧ ರಾಷ್ಟ್ರಗಳು ಕೃಷಿಯಲ್ಲಿ ನವನವೀನ ತಂತ್ರಜ್ಞಾನ, ವೃತ್ತಿಪರತೆ ಮೈಗೂಡಿಸಿಕೊಂಡು ಕೃಷಿ ಕ್ಷೇತ್ರದಲ್ಲಿ ಮಾರ್ಪಾಡು ಹೊಂದಲಿವೆ ಎಂಬುದಕ್ಕೆ ಸ್ಪೇನ್‌ನಲ್ಲಿ ನಡೆದ "ಫಿಮಾ ಅಗ್ರಿಕೋಲ" ಅಂತಾರಾಷ್ಟ್ರೀಯ ಕೃಷಿ ವಸ್ತುಪ್ರದರ್ಶನ ಸಾಕ್ಷಿಯಾಯಿತು ಎಂದು ರಾಜ್ಯ ಸರ್ಕಾರದ ಪ್ರತಿನಿದಿಯಾಗಿ ಭಾಗವಹಿಸಿದ್ದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ತಿಳಿಸಿದ್ದಾರೆ.

ಕೃಷಿ ಎಂದಾಕ್ಷಣ ನೀರು, ಕೂಲಿ ಆಳುಗಳ ಸಮಸ್ಯೆ ಪ್ರಮುಖವಾಗಿ ಕಾಣುತ್ತದೆ. ಆದರೆ ಈ ಕೃಷಿ ಮೇಳ ಇವೆಲ್ಲವುದಕ್ಕೂ ಪರಿಹಾರಗಳನ್ನು ಕಲ್ಪಿಸಿದೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಲಾಭದಾಯಕ ಕೃಷಿ ಹೇಗೆ ಮಾಡಬಹುದು ಎಂಬುದರ ಕುರಿತು ಅಲ್ಲಿನ ಕೃಷಿ ತಜ್ಞರು ಅಧಿಕಾರಿಗಳೊಂದಿಗೆ ವಿಸ್ತೃತವಾಗಿ ಚರ್ಚೆ ನಡೆಸಲಾಯಿತು ಎಂದು ಸಚಿವರು ಪ್ರವಾಸದ ನಂತರ ಬೆಂಗಳೂರಿನಲ್ಲಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿಯಲ್ಲಿ ಆಧುನಿಕ ಯಂತ್ರಗಳ ಆವಿಷ್ಕಾರ, ಬಳಕೆ ಮುಂತಾದ ವಿಚಾರಗಳು ಸೇರಿದಂತೆ ಕೃಷಿ ಪವರ್ ಯೂನಿಟ್‌ಗಳು, ಬಿತ್ತನೆ ಯಂತ್ರೋಪಕರಣಗಳು, ನಾಟಿ, ಕಟಾವು ತಂತ್ರಜ್ಞಾನ, ನೀರಾವರಿ ವ್ಯವಸ್ಥೆ, ಹಸಿರು ಮನೆ ಪರಿಣಾಮಗಳು, ಗಾರ್ಡನ್ ಉಪಕರಣಗಳು, ಲಾಜಿಸ್ಟಿಕ್ ಸೇವೆಗಳು ಸೇರಿದಂತೆ ಪ್ರಮುಖ ಕೃಷಿ ಸಂಬಂಧಿತ



ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಪಡೆದ ಸಚಿವರು ಕರ್ನಾಟಕ ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ವಿವಿಧ ರಾಷ್ಟ್ರಗಳ ಕೃಷಿ ಕಂಪನಿಗಳ ಮುಖ್ಯಸ್ಥರುಗಳನ್ನು ಆಹ್ವಾನಿಸಿದ್ದಾರೆ.

ಈ ಕೃಷಿ ಮೇಳದಲ್ಲಿ ವಿವಿಧ ರಾಷ್ಟ್ರಗಳ ರಾಯಬಾರಿ ಕಚೇರಿಗಳ ಅಧಿಕಾರಿಗಳು ಮಾನ್ಯ ಸಚಿವರೊಂದಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿ ಕೆಲವು ಕಂಪನಿಗಳ ಮುಖ್ಯಸ್ಥರು ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವುದಾಗಿ ತಿಳಿಸಿರುತ್ತಾರೆ ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಗಾಗಲೇ ರಾಜ್ಯದಲ್ಲಿ ರೈತರಿಗೆ ಹನಿ ನೀರಾವರಿ ಪದ್ಧತಿ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಳೆ ನೀರು ಸಂಗ್ರಹಣೆ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನು ರಾಜ್ಯ ಸರ್ಕಾರ ಹಮ್ಮಿಕೊಂಡಿದೆ ಎಂದರು. ಆಧುನಿಕ ಕೃಷಿ ಪದ್ಧತಿಯಲ್ಲಿ ಕೃಷಿ ಉತ್ಪನ್ನಗಳ ಹೆಚ್ಚಳ, ಪರಿಸರ ಸಂರಕ್ಷಣೆಗೆ ವಿನೂತನ ಪರಿಹಾರಗಳ ಬಗ್ಗೆಯೂ ವಸ್ತು ಪ್ರದರ್ಶನದಲ್ಲಿ ಗಮನ ಸೆಳೆದ ಅಂಶಗಳು. ಕೃಷಿ ಉತ್ಪನ್ನ ಹಾಗೂ ಕೃಷಿ ಯಂತ್ರೋಪಕರಣಗಳ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿ ವಿಶ್ವದ 80 ದೇಶಗಳ 1600ಕ್ಕೂ ಹೆಚ್ಚು ಪ್ರದರ್ಶಕರು ಹಾಗೂ 2.30 ಲಕ್ಷಕ್ಕೂ ಅಧಿಕ ಗಣ್ಯರು – ಕೃಷಿ ತಂತ್ರಜ್ಞರು – ಕೃಷಿಕರು – ಸಹಕಾರಿ ಮುಖಂಡರುಗಳು ಭಾಗವಹಿಸಿರುತ್ತಾರೆ.

ಕರ್ನಾಟಕ ರಾಜ್ಯ ಸರ್ಕಾರದ ಪ್ರತಿನಿಧಿಗಳಾಗಿ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರೊಂದಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿರ್ದೇಶಕರು, ಮೈಸೂರು ಮುಡಾ ಹಾಗೂ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಹೆಚ್.ವಿ. ರಾಜೀವ್, ಕೃಷಿ ತಂತ್ರಜ್ಞರು ಹಾಗೂ ಉದ್ಯಮಿ ರಾಮಚಂದ್ರಗೌಡ ಅವರುಗಳು ಭಾಗವಹಿಸಿದ್ದರು.

# 28 ವರ್ಷಗಳ ಸಾರ್ಥಕತೆಯ ಸೇವೆ : ಪ್ರಗತಿಯ ಪಥದಲ್ಲಿ ಬೆಂಗಳೂರಿನ ಶ್ರೀ ಚೌಡೇಶ್ವರಿ ಪತ್ತಿನ ಸಹಕಾರ ಸಂಘ

ನೇಕಾರರ ಆರ್ಥಿಕ ಅಭ್ಯುದಯಕ್ಕಾಗಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡು ಸದಸ್ಯ ಸೇವೆಗಳಲ್ಲಿ ಕ್ರಿಯಾಶೀಲವಾಗಿರುವ ಚೌಡೇಶ್ವರಿ ಪತ್ತಿನ ಸಹಕಾರ ಸಂಘವು ಸಾರ್ಥಕತೆಯ 28 ವರ್ಷಗಳಿಂದ ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಸಂಘದ ಅಧ್ಯಕ್ಷರಾದ ಶ್ರೀ ಎನ್.ಕೃಷ್ಣಪ್ಪರವರ ಮಾರ್ಗದರ್ಶನದಲ್ಲಿ ಶ್ರೀ ಚೌಡೇಶ್ವರಿ ಪತ್ತಿನ ಸಹಕಾರ ಸಂಘವು 2019ರಲ್ಲಿ ಸಾರ್ಥಕತೆಯ ತನ್ನ 25 ವರ್ಷಗಳ ಸಂಭ್ರಮಾಚರಣೆಯನ್ನು ಆಚರಿಸಿಕೊಂಡಿರುವುದು ಹೆಮ್ಮೆಯ ವಿಚಾರವಾಗಿದೆ.

ಸಂಘದ ಇತಿಹಾಸವನ್ನು ಗಮನಿಸಿದಾಗ ಬೆಂಗಳೂರಿನ ತೊಗಟವೀರ ಸಂಘದ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಸಿ.ನರಸಿಂಹಯ್ಯರವರ ಅಧ್ಯಕ್ಷತೆಯಲ್ಲಿ, ಉಪಾಧ್ಯಕ್ಷರಾಗಿದ್ದ ಶ್ರೀ ಬಿ.ಟಿ.ವೆಂಕಟರಾಮಯ್ಯನವರ ಉಪಸ್ಥಿತಿಯಲ್ಲಿ ಸಮಾಜದ ಅಭಿವೃದ್ಧಿಗಾಗಿ ಪತ್ತಿನ ಸಹಕಾರ ಸಂಘ ಸ್ಥಾಪಿಸಬೇಕೆಂಬ ಆಶಯವನ್ನು ಸಮಾಜದ ಮುಖಂಡರುಗಳು ಹೊಂದಿದ್ದರು. ಅಂತಿಮವಾಗಿ 1994ರಲ್ಲಿ ಸಮಾಜದ ಮುಖಂಡರುಗಳ ಒತ್ತಾಸೆಯ ಮೇರೆಗೆ ಶ್ರೀ ಬಿ.ಟಿ ಬೆಂಕಟರಾಮಯ್ಯರವರ ಮುಂದಾಳತ್ವದಲ್ಲಿ ತೊಗಟವೀರ ಸಮಾಜದ ನೇಕಾರರ ಆರ್ಥಿಕ ಸ್ವಾವಲಂಬನೆ ಹಾಗೂ ಬಡ, ಮಧ್ಯಮವರ್ಗದವರ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸುವ ನಿಟ್ಟಿನಲ್ಲಿ ದಿನಾಂಕ : 13.04.1994 ರಂದು ಸಂಘದ ಆರಂಭಕ್ಕೆ ಚಾಲನೆ ದೊರೆಯಿತು.

ನಂತರದ ದಿನಗಳಲ್ಲಿ ಸಂಘವು ನಿಧಾನವಾಗಿ ಅಭಿವೃದ್ಧಿ ಹೊಂದುತ್ತಾ ಸಾಗಿತು. ಪ್ರಸ್ತುತ ಸಂಘದ ಅಧ್ಯಕ್ಷರಾಗಿ ಶ್ರೀ ಎನ್.ಕೃಷ್ಣಪ್ಪ ಮತ್ತು ಆಡಳಿತಮಂಡಳಿಯ ನಿರ್ದೇಶಕರುಗಳ ಪರಿಶ್ರಮದಿಂದ ಸಂಘವು ಮತ್ತಷ್ಟು ಸಧೃಡಗೊಳ್ಳುತ್ತಾ ಅಭವೃದ್ಧಿಯ ವೇಗ ಹೆಚ್ಚಿಸಿಕೊಂಡು ಸಾಗಿರುವುದು ಸಹಕಾರ ಚಳವಳಿಗೆ ಕೋಡು ಮೂಡಿಸಿದೆ.

ಮೂರು ದಶಕಗಳ ಸಧೃಡ ಬೆಳವಣಿಗೆಯಲ್ಲಿ ಸೇವೆ ಸಲ್ಲಿಸಿರುವ



ಎನ್.ಕೃಷ್ಣಪ್ಪ
ಅಧ್ಯಕ್ಷರು



ಜಿ. ವಿಜಯಕುಮಾರ
ಉಪಾಧ್ಯಕ್ಷರು

ಮಾಜಿ ಅಧ್ಯಕ್ಷರುಗಳು, ನಿರ್ದೇಶಕರುಗಳ ಪರಿಶ್ರಮ, ಮಾರ್ಗದರ್ಶನ ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಕಾಣಬಹುದಾಗಿದೆ.

**ಬೆಳ್ಳಿ ಹಬ್ಬದ ಸಂಭ್ರಮ :** ಸಂಘದ ಸಾರ್ಥಕತೆಯ 25ವರ್ಷಗಳ ಸಂಭ್ರಮಾಚರಣೆಯನ್ನು ಸಂಘದ ಅಧ್ಯಕ್ಷರಾದ ಎನ್.ಕೃಷ್ಣಪ್ಪ ಅವರ ಅಧ್ಯಕ್ಷತೆಯಲ್ಲಿ 2019ರಲ್ಲಿ ಆಚರಿಸಲಾಗಿದೆ. ಆ ಸಂದರ್ಭದಲ್ಲಿ ಪುಷ್ಪಾಂಡಜ ಆಶ್ರಮದ ಶ್ರೀ ದಿವ್ಯ ಜ್ಞಾನಾನಂದ ಗಿರಿ ಸ್ವಾಮೀಜಿಯವರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಹಾಗೆಯೇ, ಸದರಿ ಕಾರ್ಯಕ್ರಮವನ್ನು ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರಾಗಿದ್ದ ಮಾಜಿ ಸಚಿವರು ಆದ ಶ್ರೀ ಬಿ.ಜಿ. ಪುಟ್ಟಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಕೋರಿ ಸಂಘವು ತನ್ನ ಸೇವೆಗಳನ್ನು ಮತ್ತಷ್ಟು ವಿಸ್ತರಿಸಿಕೊಳ್ಳಲು ಸಲಹೆ ಮಾಡಿದ್ದರು. ಶ್ರೀ ಚೌಡೇಶ್ವರಿ ಪತ್ತಿನ ಸಹಕಾರ ಸಂಘವು ತನ್ನ ಸಹಕಾರಿ ಸೇವೆಗಳ ಜೊತೆಗೆ ಸಾಮಾಜಿಕ ಚಟುವಟಿಕೆಗಳಲ್ಲೂ ಭಾಗಿಯಾಗುತ್ತಾ ಬಂದಿದೆ.

# ಜಿ.ಟಿ. ದೇವೇಗೌಡರ ಕುಟುಂಬದಲ್ಲಿ ಸಂಭವಿಸಿದ ಧಾರುಣ ಘಟನೆಗೆ

# ಪ್ರಧಾನಿ ನರೇಂದ್ರ ಮೋದಿಜೀಯವರ ಸಂತಾಪ

सत्यमेव जयते

प्रधान मंत्री

Prime Minister

New Delhi
वैशाख 29, शक संवत् 1944
19th May, 2022

**Shri G T Devegowda Ji,**

I am shocked and deeply pained to learn about the passing away of your granddaughter, Gowri. It is almost impossible to believe that she has left the world at such a tender age. My deepest, heartfelt condolences are with the family in this hour of intense grief.

The loss of a child at such a young age is an extremely difficult time for the parents and for you, as the grandfather. The deep sense of loss for the family is beyond words. May the memories left behind by Gowri provide solace to the family.

I pray to the Almighty to grant strength to the family members and well-wishers to bear this irreparable loss.

May the departed soul rest in peace.

**(Narendra Modi)**

**Shri G T Devegowda**
MLA, Karnataka Legislative Assembly
House No.509, New Kalidasa Road
Vijayanagar, 1st Stage, Mysuru
Karnataka – 570017

### ಪತ್ರದ ಸಾರಾಂಶ

ಶ್ರೀ ಜಿ.ಟಿ. ದೇವೇಗೌಡ ಜೀ,

ನಿಮ್ಮ ಮೊಮ್ಮಗಳು ಗೌರಿ ಅವರ ನಿಧನದ ಸುದ್ಧಿ ತಿಳಿದು ನನಗೆ ಆಘಾತವಾಗಿದೆ ಮತ್ತು ತೀವ್ರ ನೋವಾಗಿದೆ.

ಇಷ್ಟು ಎಳೆ ವಯಸ್ಸಿನಲ್ಲಿ ಆಕೆ ಇಹಲೋಕ ತ್ಯಜಿಸಿದ್ದಾಳೆ ಎಂದರೆ ನಂಬುವುದು ಅಸಾಧ್ಯ. ತೀವ್ರ ದುಃಖದ ಈ ಸಮಯದಲ್ಲಿ ನನ್ನ ಹೃತ್ಪೂರ್ವಕ ಸಂತಾಪಗಳು.

ಅಂತಹ ಚಿಕ್ಕ ವಯಸ್ಸಿನಲ್ಲಿ ಮಗುವಿನ ಸಾವಿನ ನಷ್ಟವು ಪೋಷಕರಿಗೆ ಮತ್ತು ಅಜ್ಜನಾದ ನಿಮಗೆ ಅತ್ಯಂತ ಕಷ್ಟಕರ ಸಮಯವಾಗಿದೆ. ಕುಟುಂಬಕ್ಕೆ ಆದ ನಷ್ಟ ಪದಗಳ ವಿವರಣೆಗೆ ಮೀರಿದೆ. ಗೌರಿ ಬಿಟ್ಟು ಹೋಗಿರುವ ನೆನಪುಗಳು ಕುಟುಂಬಕ್ಕೆ ಸಾಂತ್ವನ ನೀಡಲಿ.

ಈ ತುಂಬಲಾರದ ನಷ್ಟವನ್ನು ಭರಿಸುವ ಶಕ್ತಿಯನ್ನು ಕುಟುಂಬದ ಸದಸ್ಯರಿಗೆ ಮತ್ತು ಹಿತೈಷಿಗಳಿಗೆ ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಅಗಲಿದ ಆತ್ಮಕ್ಕೆ ಶಾಂತಿ ಸಿಗಲಿ.

**ನರೇಂದ್ರ ಮೋದಿ**
**ಪ್ರಧಾನಿಯವರು**

## ಪ್ರಧಾನಿ ನರೇಂದ್ರ ಮೋದಿಜೀ ಅವರಿಗೆ ಜಿ.ಟಿ. ದೇವೇಗೌಡರ ನಮನಗಳು



ಪ್ರಧಾನಿ ನರೇಂದ್ರ ಮೋದಿಜೀ ಅವರು ನಮ್ಮ ಕುಟುಂಬದ ಕಂದನ ಆಕಸ್ಮಿಕ ನಿಧನದ ಸುದ್ದಿಯನ್ನು ತಿಳಿದು ತಮ್ಮೆಲ್ಲ ಕಾರ್ಯಗಳ ಮಧ್ಯೆಯೂ ಅತ್ಯಂತ ಅಂತಃಕರಣಪೂರಿತ ಸಂತಾಪ ಸೂಚನೆಯನ್ನು ಒಳಗೊಂಡ ಪತ್ರವೊಂದನ್ನು ಬರೆದು, ನನ್ನ ಮತ್ತು ನನ್ನ ಕುಟುಂಬದ ಸದಸ್ಯರ ದುಃಖದಲ್ಲಿ ಪಾಲ್ಗೊಂಡಿರುವುದಾಗಿ ತಿಳಿಸಿ ಕಂದನ ನಿಧನ ಅತ್ಯಂತ ದುಃಖಪೂರಿತವಾದುದೆಂದು, ನಿಧನದ ದುಃಖವನ್ನು ಸಹಿಸುವುದು ಅತ್ಯಂತ ಕಷ್ಟದಾಯಕವಾದುದೆಂದು ವಿವರಿಸಿ ಕಂದನ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲೆಂದು ಹಾರೈಸಿದ್ದಾರೆ. ಅದರ ಜತೆಗೆ ನನ್ನ ಮತ್ತು ನನ್ನ ಕುಟುಂಬಕ್ಕೆ ಕಂದನ ನಿಧನ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನನ್ನು ಪ್ರಾರ್ಥಿಸಿದ್ದಾರೆ.

ಪ್ರಧಾನಿಯವರ ಸಂತಾಪ ಸೂಚನೆ ನಮ್ಮಲ್ಲಿ ಅತ್ಯಂತ ಕೃತಜ್ಞತಾಭಾವನೆಯನ್ನು ಉಂಟು ಮಾಡಿದೆ. ರಾಷ್ಟ್ರದ ಬಗ್ಗೆ ಸದಾ ಚಿಂತಿಸುವ ಅತ್ಯಂತ ಉನ್ನತ ಸ್ಥಾನದಲ್ಲಿರುವ ಪ್ರಧಾನಿಯವರು ಕುಟುಂಬದಲ್ಲಾದ ದುರ್ಘಟನೆಯ ಬಗ್ಗೆ ಅತ್ಯಂತ ಕಾಳಜಿಯನ್ನು ವಹಿಸಿ, ಪತ್ರವನ್ನು ಬರೆಯುವ ಮೂಲಕ ನನಗೆ ಹಾಗೂ ಕುಟುಂಬದವರಿಗೆ ಧೈರ್ಯವನ್ನು ತುಂಬಿದುದಕ್ಕಾಗಿ ಹಾಗೂ ನಮ್ಮ ದುಃಖದಲ್ಲಿ ಪಾಲ್ಗೊಂಡಿದುದಕ್ಕಾಗಿ ನಾನು ಹಾಗೂ ನನ್ನ ಕುಟುಂಬದ ಎಲ್ಲಾ ಸದಸ್ಯರು ಪ್ರಧಾನಿ ನರೇಂದ್ರ ಮೋದಿಜೀ ರವರಿಗೆ ತುಂಬು ಹೃದಯದ ನಮನಗಳು.

# ಗಾಯತ್ರಿ ಪತ್ತಿನ ಸಹಕಾರ ಸಂಘದ ಬೆಳ್ಳಿ ಮಹೋತ್ಸವ ಸಂಭ್ರಮ

## ನಿಷ್ಠೆ, ಪ್ರಾಮಾಣಿಕತೆಯಿಂದ ಸಹಕಾರ ಕ್ಷೇತ್ರ ಮುನ್ನಡೆಯಲು ಸಾಧ್ಯ : ಸಿದ್ದರಾಮಯ್ಯ



**ಸೂಳೇಭಾವಿ :** ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಯಲ್ಲಿ ಪ್ರಮುಖವಾದ ಪಾತ್ರವಹಿಸುತ್ತದೆ ಎಂದು ಮಾಜಿ ಮುಖ್ಯ ಮಂತ್ರಿ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೇಳಿದರು. ಏಪ್ರಿಲ್ 29 ರಂದು ನಡೆದ ಗಾಯತ್ರಿ ಪತ್ತಿನ ಸಹಕಾರ ಸಂಘದ ಬೆಳ್ಳಿ ಮಹೋತ್ಸವ ಸಂಭ್ರಮ ಹಾಗೂ ಸಂಘದ ನೂತನ ಕೇಂದ್ರ ಕಚೇರಿಯ ಕಟ್ಟಡದ ಉದ್ಘಾಟನೆ ನೇರವೇರಿಸಿ ಅವರು ಮಾತನಾಡಿದರು.

ದೇಶದಲ್ಲಿಯೇ ಮೊದಲನೇ ಸಹಕಾರ ಸಂಘ ಸ್ಥಾಪನೆ ಮಾಡಿದ ಕೀರ್ತಿ ಕರ್ನಾಟಕದ ಗದಗ ಜಿಲ್ಲೆಯ ಕಣಗಿನಾಳ ಗ್ರಾಮದ ಶಿದ್ದನಗೌಡ ಸಣ ರಾಮನಗೌಡ ಪಾಟೀಲ ಅವರಿಗೆ ಸಲ್ಲುತ್ತದೆ. ಮನುಷ್ಯನ ವಿಕಾಸವಾಬೇಕಾದರೆ ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಸಂಘದ ಮೂಲಕ ಅಭಿವೃದ್ಧಿ ಮಾಡಲು ಸಾಧ್ಯ. ಆದರೆ ಪ್ರಾಮಾಣಿಕ ಪ್ರಯತ್ನ ಬೇಕು ಇಲ್ಲದಿದ್ದರೆ ಸಹಕಾರ ಚಳವಳಿಯ ಉದ್ದೇಶ ಈಡೇರಲ್ಲ ಎಂದರು. ಸಹಕಾರ ಸಂಘ ಲಾಭದಾಯಕವಾಗಿ ನಡೆದರೆ ಅದರ ಸದಸ್ಯರಿಗೂ ಸಾರ್ವಜನಿಕವಾಗಿ ಅನುಕೂಲವಾಗುತ್ತದೆ. ಅದಕ್ಕೆ ಸಹಕಾರ ಸಂಘ ನಿಷ್ಠೆ, ಪ್ರಾಮಾಣಿಕತೆಯಿಂದ ನಡೆಸಬೇಕು. ಗಾಯತ್ರಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ರವೀಂದ್ರ ಕಲಬುರ್ಗಿ ಅವರ ಪ್ರಾಮಾಣಿಕವಾದ ಮನೋಭಾವದಿಂದ ಸಂಘವು 25 ವರ್ಷಗಳ ಕಾಲ ಯಶಸ್ವಿಯಾಗಿ ಸಾಗುತ್ತಿದೆ ಎಂದರು.

ಈ ಸಂಘದಿಂದ ಬಡವರಿಗೆ, ನೇಕಾರರಿಗೆ, ಕೂಲಿ ಕಾರ್ಮಿಕರಿಗೆ ಬೀದಿ, ವ್ಯಾಪಾರಸ್ಥರಿಗೆ, ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಆರ್ಥಿಕ ಶಕ್ತಿ ತುಂಬುವಂತೆ ಕೆಲಸ ಮಾಡಬೇಕು ಅವರಿಗೆ ಅಗತ್ಯಗೆ ತಕ್ಕಂತೆ ಆರ್ಥಿಕ ಸೌಲಭ್ಯ ಒದಗಿಸುವ ಕೆಲಸ ಮಾಡಬೇಕು. ಸಹಕಾರ ಸಂಘಗಳ ಮೇಲೆ ಜನರ ವಿಶ್ವಾಸ, ನಂಬಿಕೆ ಉಳಿಯಬೇಕಾದರೆ ಸಂಘದ ಆಡಳಿತ ಮಂಡಳಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಗಾಯತ್ರಿ ಪತ್ತಿನ ಸಹಕಾರ ಸಂಘ 25 ವರ್ಷಗಳಲ್ಲಿ ಸುಮಾರು 19 ಶಾಖೆಗಳನ್ನು ಹೊಂದಿ ಮತ್ತು ಬೆಳ್ಳಿ ಮಹೋತ್ಸವ ಸಮಾರಂಭದಲ್ಲಿ 6 ಶಾಖೆಗಳು ಉದ್ಘಾಟನೆಯಾಗಿದ್ದು, ಒಟ್ಟು 25 ಶಾಖೆಗಳನ್ನು ಹೊಂದಿದೆ ಇದು ಶ್ಲಾಘನೀಯ ಕಾರ್ಯ ಪ್ರತಿಯೊಂದು ಶಾಖೆಯೂ ಬಡವರಿಗೆ ಸಹಕಾರಿಯಾಗಲಿ ಎಂದರು.

ಸಮಾರಂಭದಲ್ಲಿ ಗುಳೇದಗುಡ್ಡದ ಜಗದ್ಗುರು ಗುರುಸಿದ್ದೇಶ್ವರ ಬ್ರಹನ್ಮಠದ ಜಗದ್ಗುರು ಬಸವರಾಜ ಪಟ್ಟದಾರ್ಯ ಸ್ವಾಮೀಜಿ, ಹಂಪಿ ಹೇಮಕೂಟ ಗಾಯತ್ರಿ ಪೀಠದ ಜಗದ್ಗುರು ದಯಾನಂದ ಪುರಿ ಸ್ವಾಮೀಜಿ, ಹಳೆಹುಬ್ಬಳ್ಳಿ ವೀರ ಬಿಕ್ಷುಬರ್ತಿ ಮಠದ ಜಗದ್ಗುರು ಶಂಕರ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನಿಧ್ಯ ವಹಿಸಿದ್ದರು.

ಗಾಯತ್ರಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ರವೀಂದ್ರ ಕಲಬುರ್ಗಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು ಹಾಗೂ ಸಂಘದ ಉದ್ದೇಶ, ಸೇವೆಗಳ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಮಾಜಿ ಸಚಿವ ಎಚ್.ವೈ. ಮೇಟಿ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯ ಕುಮಾರ್ ಸರನಾಯಕ, ಮಾಜಿ ಶಾಸಕರಾದ ಎಸ್.ಜಿ ನಂಜಯ್ಯನಮಠ, ವಿಜಯಾನಂದ ಕಾಶಪ್ಪನವರ, ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾದ ಮುರಗೇಶ ಕಡ್ಲಮಟ್ಟಿ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಕಾಶೀನಾಥ ಹುಡೇದ ಅವರುಗಳು ಸೇರಿದಂತೆ ಹಲವಾರು ಹಿರಿಯ ಸಹಕಾರಿಗಳು, ಗಾಯತ್ರಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರು, ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಭಾಗಿಯಾಗಿದ್ದರು.

## ದಶಮಾನೋತ್ಸವದ ಸಂಭ್ರಮ

# ಪ್ರಗತಿಯ ಪಥದಲ್ಲಿ ಶ್ರೀ ಪಾರ್ಶ್ವನಾಥ ಸ್ವಾಮಿ ಸಹಕಾರ ಸಂಘ, ಹೊಸದುರ್ಗ

ಪರಸ್ಪರ ಸಹಕಾರ ಮತ್ತು ಸಹಬಾಳ್ವೆಯ ತತ್ವದ ಮೇಲೆ ರೂಪಗೊಂಡಿರುವ ಸಹಕಾರ ವ್ಯವಸ್ಥೆ ಭಾರತದಲ್ಲಿ 1904 ರಲ್ಲಿ ಕಾಯ್ದೆಯ ರೂಪದಲ್ಲಿ ಜಾರಿಗೊಂಡು ಆಂದೋಲನದ ರೂಪ ಪಡೆಯಿತು. ಭಾರತದಲ್ಲಿ ಕರ್ನಾಟಕವು ಸಹಕಾರ ಆಂದೋಲನದ ಜನ್ಮಭೂಮಿಯಾಗಿದೆ. "ಸಹಕಾರ" ಎಂಬ ಪದವೇ ಒಟ್ಟಿಗೆ ಕೆಲಸ ಮಾಡು ಎಂಬುದಾಗಿದೆ. ಆರ್ಥಿಕವಾಗಿ ಅಬಲರಾದವರಿಗೆ ನೆರವಾಗಿ ಅವರನ್ನು ಸ್ವಾವಲಂಬಿಗಳಾಗಿಸುವ ಜೊತೆಗೆ ಆ ಸದಸ್ಯರಲ್ಲಿ ಉಳಿತಾಯ ಮನೋಭಾವನೆ ಬೆಳೆಸಿ, ಅವರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಪ್ರೋತ್ಸಾಹ ನೀಡುವುದು ಸಹಕಾರ ಚಳವಳಿಯ ಮೂಲ ಆಶಯವಾಗಿದೆ. ಈ ಸದುದ್ದೇಶದ ಈಡೇರಿಕೆಗಾಗಿ ಇಂದು ಹಲವಾರು ಸಹಕಾರ ಸಂಸ್ಥೆಗಳು ಪ್ರಾರಂಭವಾಗಿ ಉತ್ತಮವಾಗಿ ಕಾರ್ಯನಿರ್ವಹಿಸುವುದರೊಂದಿಗೆ ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದೆ.

ಇಂತಹ ಸಹಕಾರ ಸಂಘಗಳಲ್ಲಿ ಚಿತ್ರದುರ್ಗ ಜಿಲ್ಲೆ ಹೊಸದುರ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾರ್ಶ್ವನಾಥ ಸ್ವಾಮಿ ಸಹಕಾರ ಸಂಘವೂ ಒಂದಾಗಿದೆ. ಚಿತ್ರದುರ್ಗ ಜಿಲ್ಲೆಯು ಹಲವು ವೈಶಿಷ್ಟಗಳೊಂದಿಗೆ ತನ್ನದೇ ಇತಿಹಾಸ ಇದೆ. ಅದರಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿರುವ ಪಾರ್ಶ್ವನಾಥ ಸ್ವಾಮಿ ಸಹಕಾರ ಸಂಘವು ಮಾದರಿ ಸಂಘವಾಗಿ ಸೇವೆ ಸಲ್ಲಿಸುತ್ತಿದೆ. ಈ ಸಂಘವನ್ನು ದಿನಾಂಕ: 31-03-2011ರಂದು ಆರಂಭಿಸಲಾಯಿತು. ಪ್ರಾರಂಭದಲ್ಲಿ 200 ಜನ ಸದಸ್ಯರಿಂದ ರೂ. 2 ಲಕ್ಷ ಷೇರು ಬಂಡವಾಳದೊಂದಿಗೆ ಪ್ರಾರಂಭವಾದ ಈ ಸಂಘವು ಪ್ರಸ್ತುತ 584 ಜನ ಸದಸ್ಯರನ್ನು ಒಳಗೊಂಡು. 10.96 ಷೇರು ಬಂಡವಾಳ ಹೊಂದಿದೆ.

ಈ ಸಹಕಾರ ಸಂಘವು 10 ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿ, ದಿನಾಂಕ: 7-1-2022 ರಂದು ದಶಮಾನೋತ್ಸವವನ್ನು




ಅದ್ದೂರಿಯಾಗಿ ಜಿಲ್ಲೆಯ ಹಿರಿಯ ಸಹಕಾರಿಗಳು, ಸಚಿವರುಗಳು ಹಾಗೂ ಶಾಸಕರುಗಳ ಉಪಸ್ಥಿತಿಯಲ್ಲಿ ಆಚರಿಸಿಕೊಂಡಿದೆ.

ಹೊಸದುರ್ಗ ಪಟ್ಟಣದಲ್ಲಿ ಜನರ ಆರ್ಥಿಕ, ಸಾಮಾಜಿಕ ಬದುಕನ್ನು ಆದರ್ಶಗಳ ಬೆಳಕಿನಲ್ಲಿ ಕಟ್ಟಲು "ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು" ಎಂಬ ಸಹಕಾರ ತತ್ವಗಳ ಚಿಂತನೆಯನ್ನು ಮಾಡಿ 11 ಜನ ಸದಸ್ಯರೊಡಗೂಡಿ ಇ.ವಿ. ಧನ್ಯಕುಮಾರ್, ಇವರು ಸಂಸ್ಥಾಪಕ ಅಧ್ಯಕ್ಷರಾಗಿ ಇವರ ಮಾರ್ಗದರ್ಶನದಲ್ಲಿ 2011 ರಲ್ಲಿ ಶ್ರೀ ಪಾರ್ಶ್ವನಾಥಸ್ವಾಮಿ ಅಲ್ಪಸಂಖ್ಯಾತರ ವಿವಿದೋದ್ದೇಶ ಸಹಕಾರ ಸಂಘ ಎಂಬುದಾಗಿ ಪ್ರಾರಂಭಿಸಿ ಇಲ್ಲಿಗೆ ಯಶಸ್ವಿಯಾಗಿ 10 ವರ್ಷಗಳ ಸೇವೆಯನ್ನು ಮುನ್ನಡೆಸುತ್ತಿದ್ದಾರೆ.

ತಾನೊಬ್ಬನೇ ಬಾಳಿದರೆ ಸಾಲದು, ತನ್ನೊಂದಿಗೆ ಸಮಾಜವು ಬೆಳೆಯಬೇಕೆಂಬ ಸಹಕಾರ ರಂಗದ ಮೂಲ ತತ್ವವನ್ನು ಅಳವಡಿಸಿ ಕೊಂಡು ನಡೆಯುವುದರ ಜೊತೆಗೆ ನಿಸ್ವಾರ್ಥ ಪ್ರಾಮಾಣಿಕ ಸೇವೆಯಿಂದ ಕೂಡಿದಾಗ ಯಾವುದೇ ಸಂಘ-ಸಂಸ್ಥೆಗಳು ಪ್ರಬಲವಾಗಿ ಬೆಳೆಯಲು ಸಾಧ್ಯ ಎಂಬುದು ಈ ಸಹಕಾರಿ ಸಂಘದ ಆಡಳಿತ ಮಂಡಳಿ, ಸಂಘದ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಬೆನ್ನೆಲುಬಾಗಿ ನಿಂತಿದ್ದಾರೆ.



**ಸಂಘದಿಂದ ಸದಸ್ಯರಿಗೆ ನೀಡುತ್ತಿರುವ ವಿಶೇಷ ಸೌಲಭ್ಯಗಳು :**

- ಸಂಘವು ಸಂಪೂರ್ಣವಾಗಿ ಗಣಕೀಕೃತಗೊಂಡು ಕೋರ್ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಿದೆ.
- ಸಂಘವು ಪಿಗ್ಮಿ ಸಂಗ್ರಹಣೆ ಹೊಂದಿದೆ.
- ತನ್ನ ಗ್ರಾಹಕರಿಗೆ RTGS /NEFT /Google pay scan /SMS ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ನೀಡುತ್ತಿದೆ.

| 2020–21ನೇ ಸಾಲಿನ ಪ್ರಗತಿಯ ವಿವರ (ರೂ.ಲಕ್ಷಗಳಲ್ಲಿ) | |
|---|---|
| ಸದಸ್ಯರು | 584 |
| ಷೇರು ಬಂಡವಾಳ | 27.49 |
| ಇತರೆ ನಿಧಿಗಳು | 42.36 |
| ಒಟ್ಟು ಠೇವಣಿಗಳು | 935.92 |
| ಒಟ್ಟು ಸಾಲಗಳು | 711.41 |
| ನಿವ್ವಳ ಲಾಭ | 10.90 |
| ಆಡಿಟ್ ವರ್ಗೀಕರಣ | 'ಎ' |

**ಆಡಳಿತ ಮಂಡಳಿ ಸದಸ್ಯರು**



**ಸಂಘದ ಆಡಳಿತ ಮಂಡಳಿ :** ಇ.ವಿ. ಧನ್ಯಕುಮಾರ್ – ಅಧ್ಯಕ್ಷರು, ಎಂ. ಧರಣೇಂದ್ರ – ಉಪಾಧ್ಯಕ್ಷರು

**ನಿರ್ದೇಶಕರುಗಳು :** ಹೆಚ್.ಪಿ. ಇಂದ್ರಕುಮಾರ್, ಇ.ವಿ ಅಶೋಕ, ಹೆಚ್.ವಿ ಮಹಾವೀರ್, ಬಿ.ಜೆ ಸುದರ್ಶನ್, ಬಿ.ವಿ. ಪ್ರಶಾಂತ್ ಕುಮಾರ್, ಹೆಚ್.ಡಿ ನಾಬಿರಾಜು, ಎ.ರಂಗಸ್ವಾಮಿ, ರತ್ನಾಕರ್ ದಂಡಾವತಿ, ರತ್ನಾಕರ್ ಜೆ., ಜೆ. ಸುಕೇಶ ಕುಮಾರ್, ರಾಜ. ಓ., ಭವ್ಯ ಅಶ್ವಿನ್ ಕಮಾರ್, ಇಂದ್ರಮ್ಮ ಪುಟ್ಟರಾಜ್.

**ವ್ಯವಸ್ಥಾಪಕರು :** ಟಿ.ಜಿ. ಗುರುಸ್ವಾಮಿ

ಸಂಘದ ಆಡಳಿತ ಮಂಡಳಿ ಸದಸ್ಯರ ದಕ್ಷತೆ, ಮಾರ್ಗದರ್ಶನ ಮತ್ತು ಸಿಬ್ಬಂದಿಯ ದಕ್ಷತೆಯಿಂದ ಸಂಘವು ಉತ್ತಮವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಸಂಘದ ಈ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಕಾರಣೀಭೂತರಾದ ದಕ್ಷ ಮತ್ತು ಮುತ್ಸದ್ದಿ ಆಡಳಿತ ಮಂಡಳಿ ನಿರ್ದೇಶಕರು, ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕ ಪರಿಶ್ರಮ ಕಾರಣ ಎನ್ನಬಹುದು. ಈ ಸಂಘವು ನಿರಂತರವಾಗಿ ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದ್ದು ಇತರೆ ಸಹಕಾರ ಸಂಸ್ಥೆಗಳಿಗೆ ಮಾದರಿಯಾಗಿದೆ.

# ರೂ.40,295 ಕೋಟಿ ಮೊತ್ತದ ಬ್ಯಾಂಕಿಂಗ್ ವಂಚನೆ

**ನವದೆಹಲಿ :** ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ 2021–22ರಲ್ಲಿ ರೂ.40,295 ಕೋಟಿ ಮೊತ್ತದ ವಂಚನೆ ನಡೆದಿದೆ. ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳಲ್ಲಿ 2020–21ರಲ್ಲಿ ರೂ.81,921 ಕೋಟಿ ಮೊತ್ತದ ವಂಚನೆ ನಡೆದಿತ್ತು. ಇದಕ್ಕೆ ಹೋಲಿಸಿದರೆ 2021–22ರಲ್ಲಿ ಶೇ.51ರಷ್ಟು ಇಳಿಕೆ ಕಂಡುಬಂದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ. ಆದರೆ, ವಂಚನೆಯ ಮೊತ್ತದಲ್ಲಿ ಇಳಿಕೆ ಆಗಿರುವ ಪ್ರಮಾಣದಲ್ಲಿಯೇ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಆಗಿಲ್ಲ. 2020–21ರಲ್ಲಿ ಆಗಿರುವ ವಂಚನೆ ಪ್ರಕರಣಗಳ ಸಂಖ್ಯೆ 7,940. ಮಧ್ಯಪ್ರದೇಶ ಆರ್‌ಟಿಐ ಕಾರ್ಯಕರ್ತ ಚಂದ್ರಶೇಖರ್‌ಗೌರ್ ಅವರು ಕೇಳಿದ್ದ ಪ್ರಶ್ನೆಗೆ ಆರ್‌ಬಿಐ ಈ ವಿವರಗಳನ್ನು ನೀಡಿದೆ.

| ಪ್ರಮುಖ ಬ್ಯಾಂಕ್‌ಗಳ ವಿವರ (ಕೋಟಿಗಳಲ್ಲಿ) | |
|---|---|
| ಬ್ಯಾಂಕ್ | ವಂಚನೆ ಮೊತ್ತ |
| ಪಂಜಾಬ್ ನ್ಯಾಷನಲ್ ಬ್ಯಾಂಕ್ | ರೂ.9,528 |
| ಎಸ್‌ಬಿಐ | ರೂ.6,932 |
| ಬ್ಯಾಂಕ್ ಆಫ್ ಇಂಡಿಯಾ | ರೂ.5,923 |
| ಯೂನಿಯನ್ ಬ್ಯಾಂಕ್ | ರೂ.3,989 |
| ಕೆನರಾ ಬ್ಯಾಂಕ್ | ರೂ.3,230 |
| ಇಂಡಿಯನ್ ಬ್ಯಾಂಕ್ | ರೂ.2,038 |




ಬ್ರಹ್ಮಾಂಡದಲ್ಲಿ ಜೀವಿಗಳು ಭೂಮಿಯ ಮೇಲೆ ಬದುಕಲು ಅವಕಾಶವಿದೆ. ಅನ್ಯ ಗ್ರಹಗಳಲ್ಲಿ ಜೀವಿಗಳು ಸಸ್ಯಮೂಲ ಬೆಳವಣಿಗೆಯ ಬಗ್ಗೆ ಸಂಶೋಧನೆಗಳು ನಡೆಯುತ್ತಲೇ ಇವೆ. ಪ್ರಸ್ತುತ ಜಗತ್ತಿನಲ್ಲಿ 770 ಕೋಟಿಗೂ ಅಧಿಕ ಜನರು ಜೀವಿಸುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯುತ್ತಲೇ ಇವೆ. ಇದಕ್ಕೆ ಪೂರಕವಾಗಿ ಜಲ, ವಾಯು ಸೇರಿದಂತೆ ವಿವಿಧ ಬಗೆಯ ಮಾಲಿನ್ಯ ಪ್ರಮಾಣ ಅಧಿಕಗೊಳ್ಳುತ್ತಲೇ ಇದೆ. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮಗಳು ಉಂಟಾಗಿ ರೋಗ ರುಜಿನಗಳು ಹೆಚ್ಚಾಗುತ್ತಲೇ ಇರುವುದನ್ನು ನಾವೆಲ್ಲಾ ಅನುಭವಿಸುತ್ತಿದ್ದೇವೆ. ಪ್ರತಿವರ್ಷದಂತೆ, ಜೂನ್ 5 ರಂದು ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಈ ವರ್ಷದ ಪರಿಸರ ದಿನಾಚರಣೆಯ ಧ್ಯೇಯವು 'ಒಂದೇ ಭೂಮಿ' ಎಂಬುದಾಗಿದೆ. ನಮ್ಮ ಭೂಮಿಯ ಮೇಲಿನ ಪರಿಸರವನ್ನು ಸ್ವಚ್ಛವಾಗಿರಿಸಿ ಉತ್ತಮ ಜೀವನ ಸಾಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕಾಗಿದೆ. ಇದರಲ್ಲಿ ಪ್ರತಿಯೊಬ್ಬರು ಪ್ರತಿನಿತ್ಯ ಪರಿಸರ ಮಾಲಿನ್ಯ ತಡೆಗಟ್ಟಿ ನಮ್ಮ ಭೂಮಿಯನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಹೀಗಾಗಿ, ನಮಗಿರುವುದು ಒಂದೇ ಭೂಮಿ. ಈ ಭೂಮಿಯನ್ನು ಸ್ವಚ್ಛಂದವಾಗಿ ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ವಿಶ್ವದ ಜನಸಂಖ್ಯೆಗೆ ಹೋಲಿಕೆ ಮಾಡಿದಾಗ ಪ್ರತಿನಿತ್ಯ ಕೋಟ್ಯಂತರ ಲೀಟರ್ ಪಳೆಯುಳಿಕೆಗಳ ಇಂಧನ ಬರಿದಾಗುತ್ತಿದೆ. ಕೆಲವೇ ವರ್ಷಗಳಲ್ಲಿ ಪಳೆಯುಳಿಕೆಗಳ ಇಂಧನ ಸಾಮರ್ಥ್ಯ ಕಡಿಮೆಯಾದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುವ ಸಾಧ್ಯತೆ ನಮ್ಮ ಕಣ್ಮುಂದೆ ಕಾಣುತ್ತವೆ. ಇತ್ತೀಚಿನ ದಿನಗಳಲ್ಲಿ ಅಣುಶಕ್ತಿಯ ಸುರಕ್ಷತೆಯ ಬಗ್ಗೆಯೂ ಜನ ಭಯಭೀತರಾಗುತ್ತಿದ್ದಾರೆ. ಈ ಕಾರಣಗಳಿಂದ ನಮ್ಮಲ್ಲಿ ಲಭ್ಯವಿರುವ ಸಾಂಪ್ರದಾಯಿಕ ಇಂಧನಗಳನ್ನು ಬಳಸಿಕೊಂಡು ನಾವು ಬದುಕಬೇಕಾಗಿದೆ.

ಸೂರ್ಯನಿಂದ ಸಹಸ್ರಾರು ವರ್ಷಗಳಿಂದ ಭೂಮಿಗೆ ಸೌರಶಕ್ತಿ ಲಭ್ಯವಾಗುತ್ತಲೇ ಇದೆ. ಈ ಶಕ್ತಿಯನ್ನು ಸಂಪೂರ್ಣವಾಗಿ ಸದ್ಬಳಕೆಯನ್ನು ಮಾಡಿಕೊಳ್ಳುವಲ್ಲಿ ನಾವು ಇನ್ನೂ ಮನಸ್ಸು ಮಾಡಿಲ್ಲ. ಪ್ರತಿನಿತ್ಯ ದೇಶದಲ್ಲಿ 130 ದಶಲಕ್ಷ ಯೂನಿಟ್ ವಿದ್ಯುತ್ ಬೇಡಿಕೆ ಇದೆ. ಸೌರಶಕ್ತಿ ಬಳಕೆಯಿಂದ ಸಾಧ್ಯವಾದಷ್ಟು ವಿದ್ಯುತ್ ಉತ್ಪಾದನೆ ಮಾಡಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಕ್ಷಿಪ್ರ ವೇಗದಲ್ಲಿ ಕ್ರಮಗಳನ್ನು ಕೈಗೊಂಡು ನಾಗರೀಕರಿಗೆ, ಕೈಗಾರಿಕೆಗಳಿಗೆ, ವಾಹನ ಸಂಚಾರಕ್ಕೆ ಹೀಗೆ ಮಾನವನ ಅಗತ್ಯಗಳನ್ನು ಈಡೇರಿಸಿಕೊಳ್ಳಲು ನೆರವಾಗಬೇಕಾಗಿದೆ. ಹಾಗೆಯೇ ಗಾಳಿಯಿಂದ ವಿದ್ಯುತ್ ತಯಾರಿಸುವುದನ್ನು ಕಾಣುತ್ತಿದ್ದೇವೆ. ಇದರ ಉಪಯೋಗವು ಹೆಚ್ಚಾಗಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಕಟ್ಟಡಗಳು, ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳ ತಾರಸಿಗಳ ಮೇಲೆ, ಹೆಚ್ಚು ವಿಸ್ತೀರ್ಣವಿರುವ ನಾಗರೀಕ ವಸತಿಗಳ ಮೇಲೆ ವಿದ್ಯುತ್ ಪ್ಯಾನಲ್‌ಗಳನ್ನು ಅಳವಡಿಸಿ, ಸ್ವಯಂ ಸೌರವಿದ್ಯುತ್‌ನ್ನು ಉತ್ಪಾದಿಸಿಕೊಳ್ಳಲು ನಾವು ಶಕ್ತರಿದ್ದೇವೆ. ಈ ನಿಟ್ಟಿನಲ್ಲಿ ಸರ್ಕಾರವು ಕೈಜೋಡಿಸಿದರೆ, ಸ್ವಾವಲಂಬನೆ ಸಾಧಿಸಲು ಸಾಧ್ಯವಿದೆ. ಹಾಗೆಯೇ, ಪ್ರಾಣವಾಯುವಿಲ್ಲದೇ ಯಾವೊಂದು ಜೀವಸಂಕುಲವು ಒಂದು ನಿಮಿಷವೂ ಬದುಕಲು ಸಾಧ್ಯವಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ಸುಮ್ಮನೆ ಕಲ್ಪಿಸಿಕೊಳ್ಳಿ ಮುಂದೊಂದು ದಿನ ಉಸಿರಾಡಲು ಈ ಶುದ್ಧ ಗಾಳಿಯನ್ನೇ ಕೊಂಡುಕೊಳ್ಳುವ ಪರಿಸ್ಥಿತಿ ಬಂದರೆ ಹೇಗೆ? ಎಂದು. ಕಲ್ಪನೆಯೇ ಇಷ್ಟೊಂದು ಭಯಂಕರವಾಗಿರುವಾಗ ಇನ್ನು ಇದೇ ನಿಜವಾಗಿಬಿಟ್ಟರೆ? ಹೌದು ಮುಂದೊಂದು ದಿನ ಇಂತಹ ಪರಿಸ್ಥಿತಿ ಬಂದರು ಬರಬಹುದು ಎಂದು ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ. ಈಗಾಗಲೇ ನೈಸರ್ಗಿಕ ಸಂಪನ್ಮೂಲವಾದ ಕುಡಿಯುವ ಶುದ್ಧ ನೀರನ್ನು ಕಳೆದುಕೊಳ್ಳುತ್ತಿಲ್ಲವೇ? ನಾವು ಹೀಗೇ ಪರಿಸರವನ್ನು ಕಲುಷಿತ ಮಾಡುತ್ತಿದ್ದರೆ ಮುಂದೆ ಅದಕ್ಕೆ ದೊಡ್ಡ ಬೆಲೆಯನ್ನೇ ತೆರಬೇಕಾಗಬಹುದು.

ಇದಕ್ಕೆ ಪೂರಕ ಎನ್ನುವಂತೆ ಇತ್ತೀಚೀಗೆ ಕೋರೊನಾ ಸೋಂಕಿತರಿಗೆ ಈ ಪ್ರಾಣವಾಯುವಿನ ಅಭಾವದಿಂದ ಅದೆಷ್ಟೋ ಜನರು ತಮ್ಮ ಪ್ರಾಣವನ್ನ ಕಳೆದುಕೊಂಡರು. ಅದೆಷ್ಟೋ ಜನರು ಪ್ರಾಣವಾಯುವಿನ ಗಂಭೀರ ಸಮಸ್ಯೆಗೆ ಸಿಲುಕಿ ಜೀವನ್ಮರಣದೊಂದಿಗೆ ಹೋರಾಡಿ ಬದುಕುಳಿದಿದ್ದಾರೆ.

ಇದರಿಂದ ಪ್ರಾಣವಾಯುವಿನ ಅಥವಾ ಆಕ್ಸಿಜನ್‌ನ ಮಹತ್ವದ ಅರಿವಾಗತೊಡಗಿದೆ ಎಂದರೆ ತಪ್ಪಾಗಲಾರದು. ಮಿತಿಮೀರಿದ ವಾಹನಗಳು, ಕೈಗಾರಿಕೆಗಳು ಉಗುಳುವ ಹೊಗೆಯಿಂದಾಗಿ ಕ್ಲೋರೋಪ್ಲೋರೋ ಕಾರ್ಬನ್‌ಗಳು ಮತ್ತು ಬ್ರೋಮೋಕ್ಲೋರೋ ಕಾರ್ಬನ್‌ಗಳು ಅಗಾದ ಪ್ರಮಾಣದಲ್ಲಿ ವಾಯುಮಂಡಲಕ್ಕೆ ಬಿಡುಗಡೆಯಾಗುತ್ತಿವೆ. ಇಷ್ಟು ಸಾಲದೆಂಬಂತೆ ನಗರೀಕರಣಕ್ಕೆ ಅಥವಾ ಕೈಗಾರೀಕರಣಕ್ಕೆ ಸಮೃದ್ಧ ಅರಣ್ಯಗಳನ್ನು ಕಡಿಯುವ ಪ್ರವೃತ್ತಿ ದಿನೇ ದಿನೇ ಹೆಚ್ಚುತ್ತಿರುವುದರಿಂದ ಪರಿಸರಕ್ಕೆ ಬಿಡುಗಡೆಯಾಗುವ ಕಾರ್ಬನ್ ಸಂಯುಕ್ತಗಳನ್ನು ಗಿಡಮರಗಳು ಹೀರಿಕೊಳ್ಳುವುದಕ್ಕೆ ಆಸ್ಪದವೇ ಇಲ್ಲದೆ ಓಝೋನ್ ಒಡಲು ತೆಳುವಾಗುತ್ತಿದೆ. ಹೀಗಾಗಿ ಅತಿ ನೇರಳೆ ವಿಕಿರಣವನ್ನು ಹೀರಿಕೊಳ್ಳುವ / ತಡೆಯುವ ಅದರ ಸಾಮರ್ಥ್ಯವು ಕುಸಿಯುವುದರಿಂದ ಅಪಾಯಕಾರಿ ಅತಿನೇರಳೆ (ಅಲ್ಟ್ರಾವೈಲೆಟ್) ವಿಕಿರಣ ಭೂಮಿಗೆ ತಲುಪುವ ಹಾದಿ ಸಲೀಸಾದರೆ ಜೀವ ಸಂಕುಲಕ್ಕೆ ಅಪಾಯ ಕಟ್ಟಿಟ್ಟಬುತ್ತಿ. ಈ ವಿಕಿರಣಗಳಿಗೆ ಅತಿಯಾಗಿ ಒಡ್ಡಿಕೊಳ್ಳುವುದರಿಂದ ಕಣ್ಣಿನ ಪೊರೆ, ದೇಹದ ಪ್ರತಿರಕ್ಷಣಾ

ವ್ಯವಸ್ಥೆಯ ಕುಸಿತ ಹಾಗೂ ಶರೀರದ ಡಿ.ಎನ್.ಎ.ಗೆ ಹಾನಿಯಾಗಿ ಚರ್ಮದ ಕ್ಯಾನ್ಸರ್‌ನಂಥ ಸಮಸ್ಯೆಗಳು ಹುಟ್ಟಿಕೊಳ್ಳಬಹುದು. ಅಂಥ ಜೀವ ರಕ್ಷಕ ಓಝೋನ್ ಪದರವು ಈಚೀಚೆಗೆ ಬರಿದಾಗುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಇದೆಲ್ಲ ಮಾನವನ ಸ್ವಯಂಕೃತ ಅಪರಾಧದ ಫಲಶ್ರುತಿ ಎಂದರೆ ತಪ್ಪಾಗಲಿಕ್ಕಿಲ್ಲ.

ಭೂಮಿಯ ಹವಾಮಾನ ವ್ಯವಸ್ಥೆಯ ಸರಾಸರಿ ತಾಪಮಾನದಲ್ಲಿನ ನಿರಂತರ ಹೆಚ್ಚಳವೇ 'ಜಾಗತಿಕ ತಾಪಮಾನ ಏರಿಕೆ' 21ನೇ ಶತಮಾನದ ಆರಂಭದಿಂದ ಜಾಗತಿಕ ತಾಪಮಾನ ಸುಮಾರು 0.8 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿದೆ. ಮಾನವ ಚಟುವಟಿಕೆಗಳಿಂದಾಗಿ ಉತ್ಪತ್ತಿಯಾಗುವ ಹಸಿರು ಮನೆ ಅನಿಲಗಳ ಸಾಂದ್ರತೆ ಹೆಚ್ಚುತ್ತಿರುವುದು, ಕೈಗಾರಿಕಾ ಹೊರಸೂಸಿಕೆಗಳು, ಮಿತಿ ಮೀರಿದ ಅರಣ್ಯ ನಾಶ, ಪರ್ವತ ಪ್ರದೇಶಗಳಲ್ಲಿ ಹಿಮ-ಮಂಜುಗಡ್ಡೆ ಕರಗುತ್ತಿರುವುದು ಜಾಗತಿಕ ತಾಪಮಾನ ಏರಿಕೆಗೆ ಪ್ರಮುಖ ಕಾರಣಗಳು. ಗಂಗಾ, ಬ್ರಹ್ಮಪುತ್ರಾ ನದಿಗಳಲ್ಲಿ ಕೆಲವೊಮ್ಮೆ ದಿಢೀರ್ ಪ್ರವಾಹ ಉಕ್ಕುವುದಕ್ಕೂ ಉಷ್ಣತೆಯಲ್ಲಿನ ಏರುಪೇರೇ ಕಾರಣ. 2022ರ ವರ್ಷದಲ್ಲಿ ದೇಶದ ಬಹುತೇಕ ಕಡೆ ಬೇಸಿಗೆಯ ಬಿಸಲು 40 ಡಿಗ್ರಿ ಸೆಲ್ಸಿಯಸ್‌ಗೂ ಹೆಚ್ಚು ಇರುವುದು ಪರಿಸರದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತಿದೆ. ಇವೆಲ್ಲವಕ್ಕೂ ಮನುಷ್ಯನೇ ಕಾರಣಕರ್ತನಾಗುತ್ತಿದ್ದಾನೆ ಎಂದರೆ ಅತಿಶಯೋಕ್ತಿಯೇನಲ್ಲ.

ಜಾಗತಿಕ ತಾಪಮಾನ ಏರಿಕೆಗೆ ಅರಣ್ಯ ನಾಶವು ಪ್ರಮುಖ ಕಾರಣಗಳಲ್ಲೊಂದು. ಭಾರತದಲ್ಲಿನ ಅರಣ್ಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ದೇಶದ ಹಲವೆಡೆ ಅರಣ್ಯ ಒತ್ತುವರಿ ನಡೆಯುತ್ತಲೇ ಇದೆ. ಉದ್ಯಾನ ನಗರಿ ಎಂದೇ ದೇಶ ವಿದೇಶಗಳಲ್ಲಿ ಗುರುತಿಸಿಕೊಂಡಿರುವ ನಮ್ಮ ಬೆಂಗಳೂರು ಇಂದು ಕಾಂಕ್ರೀಟ್ ಕಾಡಾಗಿ ಬದಲಾಗಿದೆ. ಅದೇ ರೀತಿಯಲ್ಲಿ ಅನೇಕ ದೊಡ್ಡ ದೊಡ್ಡ ನಗರಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಿತ್ಯ ಮರಗಳ ಮಾರಣ ಹೋಮ ನಡೆಯುತ್ತಲೇ ಇದೆ. ಇದು ಇದೇ ರೀತಿಯಲ್ಲಿ ಮುಂದುವರೆದರೆ ಮುಂದಿನ ಪೀಳಿಗೆಗೆ ಚಿತ್ರ ಪಟಗಳಲ್ಲಿ ಮಾತ್ರ ಕಾಡಿನ ಪರಿಚಯವನ್ನು ಮಾಡಬೇಕಾಗಬಹುದು.

ವಿಶ್ವದ ಪರಿಸರ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ವಿಶ್ವಸಂಸ್ಥೆಯ ಮಾರ್ಗದರ್ಶನದಲ್ಲಿ ಪ್ರತಿವರ್ಷ ಜೂನ್ 05 ರಂದು 'ವಿಶ್ವ ಪರಿಸರ ದಿನ' ಆಚರಿಸಲಾಗುತ್ತದೆ ಮತ್ತು ಪರಿಸರ ಸಂರಕ್ಷಣೆಗಾಗಿ ಜಾಗೃತಿ ಮತ್ತು ಅಗತ್ಯ ಕ್ರಮಗಳನ್ನು ಕೈಕೊಳ್ಳುವುದು ಉದ್ದೇಶದಿಂದ ಸ್ಟಾಕ್ ಹೋಮ್ ಸಮ್ಮೇಳನದ ಮೊದಲ ದಿನದಂದು ವಿಶ್ವ ಸಂಸ್ಥೆಯು 1972 ರಲ್ಲಿ ವಿಶ್ವ ಪರಿಸರ ದಿನವನ್ನು ಪ್ರಾರಂಭಿಸಿತು. ಇದರ ಪರಿಣಾಮವಾಗಿ ಮಾನವ ಸಂವಹನ ಮತ್ತು ಪರಿಸರದ ಏಕಿಕರಣ ಕುರಿತು ಚರ್ಚೆಗಳು ನಡೆದು, ವಿಶ್ವ ಪರಿಸರ ದಿನವು ಸಾರ್ವಜನಿಕವಾಗಿ ತಲುಪಲು ಜಾಗತಿಕವಾಗಿ 1974 ರಲ್ಲಿ ಮೊದಲ ವಿಶ್ವ ಪರಿಸರ ದಿನವನ್ನು 'ಕೇವಲ ಒಂದು ಭೂಮಿ' ಎಂಬ ವಿಷಯದೊಂದಿಗೆ ನಡೆಸಲಾಯಿತು. 2022ರ ವರ್ಷದಲ್ಲಿಯೂ ಕೇವಲ ಒಂದೇ ಭೂಮಿ ಎಂಬ ಧ್ಯೇಯದೊಂದಿಗೆ ಎಲ್ಲಾ ದೇಶಗಳು ವಿಶ್ವ ಪರಿಸರ ದಿನವನ್ನು ಆಚರಿಸುತ್ತಿವೆ. ಆದರೆ ಇವು ನೆಪಮಾತ್ರಕ್ಕೆ ಆಚರಣೆಗಳಾಗುತ್ತಿವೆಯೇ ಹೊರತು ಕಾರ್ಯರೂಪಕ್ಕೆ ತರುವಲ್ಲಿ ವಿಫಲವಾಗುತ್ತಿದ್ದೇವೆ. ಹೀಗೆ ಹತ್ತು ಹಲವು ಪರಿಸರ ಮಾಲಿನ್ಯಗಳನ್ನು ನಾವೇ ಸೃಷ್ಟಿಸುತ್ತಿದ್ದು, ಮತ್ತೆ ನಾವೇ ನಮ್ಮ ಪರಿಸರವನ್ನು ಸಂರಕ್ಷಿಸಿಕೊಳ್ಳಬೇಕಾದ ಪರಿಸ್ಥಿತಿ ನಮ್ಮ ಮುಂದಿದೆ.

ಪರಿಸರ ಉಳಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ಹಾಗೂ ಯುವಜನತೆಯನ್ನು ಹೆಚ್ಚಾಗಿ ತೊಡಗಿಸಿಕೊಳ್ಳಬೇಕಿದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲೆ ಪರಿಸರ ಮತ್ತು ಜೀವಸಂಕುಲದ ಬಗ್ಗೆ ಅರಿವು ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಪಾಲಕರು ಸಹಕರಿಸಬೇಕಿದೆ. ಈ ನಿಟ್ಟಿನಲ್ಲಿ ನಾವು ಮಾಡಬೇಕಾದ ಕೆಲ ಕರ್ತವ್ಯಗಳು ಇಂತಿವೆ;

- ನಮಗೆ ಸಾಧ್ಯವಾದಷ್ಟು ಸಸಿ ನೆಟ್ಟು ಅವುಗಳನ್ನು ಬೆಳೆಸೋಣ, ಪೋಷಿಸೋಣ.
- ಮರ ಮತ್ತು ಕಾಗದದ ಉತ್ಪನ್ನಗಳ ಬಳಕೆಯ ಮೇಲೆ ನಿಯಂತ್ರಣವಿಡೋಣ
- ಸಾವಯವ ಕೃಷಿಯಿಂದ ಬೆಳೆಸಲಾದ ತರಕಾರಿ ಬಳಸಿ, ರಸಗೊಬ್ಬರದಿಂದಾಗುವ ಮಾಲಿನ್ಯ ತಡೆಯೋಣ
- ಅನಗತ್ಯವಾಗಿ ಸ್ವಂತ ವಾಹನ ಬಳಸದೇ ಸಾರ್ವನಿಕ ವಾಹನ ಬಳಸೋಣ. ಇಂದಿನ ಮಕ್ಕಳು ಶಾಲಾ-ಕಾಲೇಜಿಗೆ ಹೋಗಲು ಮೋಟರ್ ಸೈಕಲ್ ಬದಲು ಸೈಕಲ್ ಬಳಸಿದರೆ ಅವರ ಆರೋಗ್ಯವನ್ನು ಕಾಪಾಡಿಕೊಂಡು ಮಾಲಿನ್ಯವನ್ನು ತಡೆಯಬಹುದು. ಹಲವು ದೇಶದಗಳಲ್ಲಿ ವಾಯು ಮಾಲಿನ್ಯ ತಡೆಯಲು ಸೈಕಲ್ ಬಳಕೆ ಮಾಡುತ್ತಿದ್ದು, ನಮ್ಮ ಭಾರತೀಯರು ಮಾಧ್ಯಮಗಳಲ್ಲಿ ನೋಡಿ ಎರಡು ಮಾತನಾಡಿ ಮರೆತು ಬಿಡುತ್ತಾರೆ. ವಾಸ್ತವವೆಂದರೆ ನಮ್ಮಲ್ಲಿ ಇಂದು ಸೈಕಲ್‌ಗಳೂ ನೋಡಲೂ ದುರ್ಲಭವಾಗಿವೆ.
- ಬಳಸಿ ಎಸೆಯುವ ವಸ್ತುಗಳಾದ ಪ್ಲಾಸ್ಟಿಕ್ ತಟ್ಟೆ, ಲೋಟ, ಪೆನ್ನು ಚೀಲಗಳ ಬದಲಿಗೆ ದೀರ್ಘ ಕಾಲ ಬಾಳಿ ಬರುವ ಪರ್ಯಾಯ ಉತ್ಪನ್ನಗಳಿಗೆ ಆದ್ಯತೆ ನೀಡೋಣ.
- ಅನವಶ್ಯಕವಾಗಿ ಟಿ.ವಿ, ಫ್ರಿಜ್, ಎ.ಸಿ. ಬಳಸಬೇಡಿ. ಇವುಗಳಿಂದ ಹಸಿರುಮನೆ ಅನಿಲಗಳ ಪ್ರಮಾಣ ಹೆಚ್ಚುತ್ತದೆ.
- ಕೈಗಾರಿಕೆಗಳ ಸ್ಥಾಪನೆಗೆ ಸೂಕ್ತ ಸ್ಥಳ ಮತ್ತು ಅದರಿಂದ ಉತ್ಪನ್ನವಾದ ಮಲಿನಗಳ ಸುರಕ್ಷಿತ ವಿಸರ್ಜನೆ ಮಾಡುವುದು ಸೂಕ್ತ.
- ಕೈಗಾರಿಕೆ ಮತ್ತು ವಾಹನಗಳಿಗೆ ಕಡಿಮೆ ಮಲಿನಕಾರಕ ಇಂಧನಗಳನ್ನು ಬಳಸಬೇಕು ಹಾಗೂ ವಾಹನಗಳ ಇಂಜನ್ ಅನ್ನು ಉತ್ತಮ ಸ್ಥಿತಿಯಲ್ಲಿಡಬೇಕು.
- ಪತ್ರಿಕೆಗಳಲ್ಲಿ ಪರಿಸರ ಸಮಸ್ಯೆ ಕುರಿತು ನಿಯಮಿತ ಲೇಖನಗಳು, ದೂರದರ್ಶನದಲ್ಲಿ ಪ್ರಭಾವಶಾಲಿ ಕಾರ್ಯಕ್ರಮಗಳು ತುಂಬಾ ಸಹಾಯಕಾರಿ.



# ಸಹಕಾರ ಸಂಘಗಳಲ್ಲಿ 'ಸಹಕಾರ ಮೌಲ್ಯ'ಗಳ ಪಾಲನೆಯ ಅಗತ್ಯತೆ.

▸▸ **ಶಶಿಧರ ಎಲೆ,** ನಿವೃತ್ತ ಅಪರ ನಿಬಂಧಕರು

ಸಹಕಾರ ಸಂಘಗಳು ಆರಂಭವಾದದ್ದು 19ನೇ ಶತಮಾನದ ಮಧ್ಯದಲ್ಲಿ, 'ಕೈಗಾರಿಕೆ ಕ್ರಾಂತಿ'ಯ ಫಲವಾಗಿ ಉಂಟಾದ ಪಲ್ಲವ ಗಳಲ್ಲಿ 'ಸಹಕಾರ ಕ್ರಾಂತಿ' ಚಳುವಳಿಯೂ ಒಂದು. ಕೈಗಾರಿಕೆ ಕಾರ್ಮಿಕರ ಶ್ರಮವನ್ನು ಅವಲಂಭಿಸಿತ್ತು. ಆದರೆ ಅದಕ್ಕೆ ತಕ್ಕ ಪ್ರತಿಫಲ ದೊರೆಯದಿದ್ದಾಗ ಅವರು ತಮ್ಮ ಬದುಕಿನ ಅವಶ್ಯಕತೆಗೆ ಅವರು ಕಂಡುಕೊಂಡ ಮಾರ್ಗ ಸಹಕಾರ ಮಾರ್ಗ. ಇಂಗ್ಲೆಂಡ್ ನ ಮ್ಯಾಟೆಸ್ಟರ್ ಪಟ್ಟಣದ ಟೋಡ್‌ಲೇನ್‌ನಲ್ಲಿ ಕಾರ್ಮಿಕರು ಸಂಘಟಿತಗೊಂಡು ಸಹಕಾರ ಸಂಘ ಸ್ಥಾಪಿಸಿದರು. ಅವರೇ 'ರಾಕ್ ಡೇಲ್ ಅಗ್ರಗಾಮಿಗಳು' ( Roch dale pioneers). ಇವರು ತಮ್ಮ ಸಹಕಾರ ಸಂಘವನ್ನು ನಡೆಸಲು ತಾವೇ ಕೆಲವೊಂದು ನೀತಿ ನಿಯಮಗಳನ್ನು ರಚಿಸಿಕೊಂಡರು. ಈ ನೀತಿ ನಿಯಮಗಳೇ ಕಾಲಕ್ರಮೇಣ 'ಸಹಕಾರ ತತ್ವ' ಗಳಾದವು. ಅಂತರ ರಾಷ್ಟ್ರೀಯ ಮೈತ್ರಿ ಸಂಸ್ಥೆ (International cooperative Alliance ICA) ಈ ತತ್ವಗಳನ್ನು ಅನುಸರಿಸುವಂತೆ ವಿಶ್ವದ ಸಹಕಾರ ಚಳುವಳಿಗೆ ದಿಕ್ಸೂಚಿಯಾಗಿ ನೀಡಿದೆ. ಕಾಲಕಾಲಕ್ಕೆ ತಕ್ಕಂತೆ ಅದರ ಬದಲಾವಣೆಗಳನ್ನು ಮಾಡುತ್ತಾ ಬಂದಿದೆ. ಪ್ರಸ್ತುತ 1994 ರ ಸಮ್ಮೇಳನದಲ್ಲಿ ಅಳವಡಿಸಿಕೊಂಡ ಏಳು (7) ತತ್ವಗಳನ್ನು ಪಾಲಿಸಲಾಗುತ್ತಿದೆ. ಅದರಂತೆ ಸಹಕಾರ ಕಾಯ್ದೆ' ಕಾನೂನು, ಉಪ ನಿಯಮಗಳು , ವ್ಯವಹಾರಗಳು ನಡೆಯುವ ಅವಶ್ಯಕತೆ ಸಹಕಾರ ಚಳುವಳಿ ದೃಷ್ಟಿಯಿಂದ ಅತಿ ಅವಶ್ಯ. ಇದೇ ಸಮ್ಮೇಳನವು ಸಹಕಾರ ಸಂಘಗಳ ಅಭ್ಯುದಯಕ್ಕೆ ಮತ್ತು ಒಟ್ಟಾರೆ ಸಹಕಾರ ಚಳುವಳಿಯ ಉತ್ತಮ ಬೆಳವಣಿಗೆ ದೃಷ್ಟಿಯಿಂದ ನಾಲ್ಕು 'ಸಹಕಾರ ಮೌಲ್ಯ' ಗಳನ್ನು ಪಾಲಿಸಲು ಪ್ರತಿಪಾದಿಸಿತು.

**ಈ 'ಸಹಕಾರ ಮೌಲ್ಯ'ಗಳು ಈ ಕೆಳಕಂಡಂತಿವೆ**

(1) ಸ್ವ-ಸಹಾಯ ಮತ್ತು ಪರಸ್ಪರ ಸಹಾಯ. Self help and mutual help.

(2) ಸ್ವಯಂ ಜವಾಬ್ದಾರಿ. Self responsiblity.

(3) ಪ್ರಜಾಪ್ರಭುತ್ವ. Democracy.

(4) ಸಮಾನತೆ, ಬಂಡವಾಳ, ಮತ್ತು ಒಗ್ಗಟ್ಟು. Equality, Equity, and solidarity.

ಈ ಮೌಲ್ಯಗಳನ್ನು ಅರ್ಥ ಮಾಡಿಕೊಂಡು ಸಹಕಾರ ಸಂಘದ ಭಾಗೀದಾರರೆಲ್ಲರೂ ಅಳವಡಿಸಿಕೊಂಡು ಆಚರಣೆಗೆ ತಂದು ಅನುಷ್ಠಾನಗೊಳಿಸಿದ್ದೇ ಆದಲ್ಲಿ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯಚರಣೆಗೊಳ್ಳುವುದಲ್ಲದೇ ಸಹಕಾರ ಚಳುವಳಿಯು ತನ್ನ ಅಂತಿಮ ಗುರಿಯಾದ ಸದಸ್ಯರ ಆರ್ಥಿಕ ಪ್ರಗತಿ, ಸಾಮಾಜಿಕ ಏಳ್ಗೆ, ಸಾಂಸ್ಕೃತಿಕ ಅಭಿವೃದ್ಧಿ ಯಾಗಲು ಕಾರಣವಾಗುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ಮೌಲ್ಯವನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಂಡು ಅಳವಡಿಸಿಕೊಂಡಲ್ಲಿ ಸಹಕಾರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಈ ಮೌಲ್ಯಗಳನ್ನು 'ಸಹಕಾರ ಸಂಘ'ದ ಭಾಗೀದಾರರುಗಳಾದ (1) ಸದಸ್ಯರು (2) ಆಡಳಿತ ಮಂಡಳಿ (3) ಸಿಬ್ಬಂದಿ ವರ್ಗದವರು ಪಾಲಿಸಬೇಕಾಗುತ್ತದೆ.

**(1) ಸ್ವಸಹಾಯ ಮತ್ತು ಪರಸ್ಪರ ಸಹಾಯ :** ಸಹ+ಕಾರ= ಸಹಕಾರ, ಯಾವುದೇ ಕಾರ್ಯವನ್ನು ಒಬ್ಬರು ಮಾಡಲಾಗುವುದಿಲ್ಲವೋ ಆ ಕಾರ್ಯವನ್ನು ಎಲ್ಲರೂ ಒಟ್ಟುಗೂಡಿ ಮಾಡುವುದೇ ಸಹಕಾರ. ತನ್ನ ಸ್ವಯಂ ಅಭಿವೃದ್ಧಿಗೆ ತಾನು ಶ್ರಮಿಸಬೇಕು ಜೊತೆ ಜೊತೆಗೆ ಇತರರನ್ನು ತನ್ನೊಡನೆ ಇತರರನ್ನು ಒಳಗೊಳ್ಳಬೇಕು. ತನಗೆ ತಾನು ಸಹಾಯ ಮಾಡಿಕೊಳ್ಳುವುದಲ್ಲದೇ ತನ್ನೊಡನೆ ಇರುವ, ತನ್ನಂತೆ ಇರುವ ಇತರೆ ಸದಸ್ಯರಿಗೆ ಕೂಡ ತಾನು ಅನುಸರಿಸಿದ ರೀತಿ, ನೀತಿ, ಮಾರ್ಗೋಪಾಯಗಳನ್ನು ತೋರಿಸಿಕೊಡುವುದು. 'ಕಾಗೆ ಒಂದುಗಳ ಕಂಡರೆ ಕರೆಯದೆ ತನ್ನ ಬಳಗವನು, ಕೋಳಿ ಒಂದು ಕುಟುಕ ಕಂಡೊಡೆ ಕೂಗಿ ಕರೆಯದೆ ತನ್ನ ಕುಲವೆನ್ನವ?' ಎಂಬ ಬಸವಣ್ಣನವರ ವಚನೋಕ್ತಿ ನೆನಪಿಗೆ ಬರುತ್ತದೆ. ಈ ಮೌಲ್ಯಕ್ಕೆ ಸರಿಹೊಂದುವಂತೆ ಈ ಹಿಂದೆ '(ಷೇರು) ಹೂಡಿಕೆ ಮೇಲೆ ಪರಿಮಿತ ಲಾಭಾಂಶ (ಡಿವಿಡೆಂಡ್)', ಎಂಬ ಸಹಕಾರ ತತ್ವ ಅಡಕವಾಗಿತ್ತು. ಸಂಘದ (ಸದಸ್ಯರ) ಭವಿಷ್ಯದ ಒಳಿತಿಗಾಗಿ ಆಪದ್ಧನ ಸೃಷ್ಟಿ, ಸಂಘದ ವ್ಯವಾರವು ಸದಸ್ಯರ ನಡುವೆ ಇರುವಂತಹ ವ್ಯವಹಾರ. ಇದರಿಂದ 'ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ' ಎಂಬುದು ಸಹಕಾರ ಸಂಘದ ಉದ್ದೇಶ. ಮತ್ತು ಎಲ್ಲರೂ ಬಲ್ಲ ನಾಣ್ಣುಡಿ. ಸಿಟಿಜನ್ ಕೋ ಆಪರೇಟೀವ್ ಬ್ಯಾಂಕ್ vs ಆಧಾಯ ತೆರಿಗೆ ಇಲಾಖೆಯ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಲಯ ಸ್ವಸಹಾಯ ಮತ್ತು ಪರಸ್ಪರ ಸಹಾಯ ಎಂಬುದು ಸಹಕಾರ ಸಂಘದ ಮೂಲಭೂತ ಅಂಶಗಳಲ್ಲಿ ಒಂದು ಎಂಬುದನ್ನು ಎತ್ತಿ ಹಿಡಿದಿದೆ. ಸದಸ್ಯರು ಸಂಘದ ಆಗು ಹೋಗುಗಳಲ್ಲಿ ಈ ಮೌಲ್ಯವನ್ನು ಪಾಲಿಸಬೇಕು. ಆಡಳಿತ ಮಂಡಳಿಯು ಈ ಮೌಲ್ಯವನ್ನು ಕಾಪಿಡುವಂತೆ ತಮ್ಮ ನಿರ್ಧಾರ, ನಿಲುವು, ನೀತಿಗಳಲ್ಲಿ ಅಳವಡಿಸಿಕೊಳ್ಳಬೇಕು.

**(2) ಸ್ವಯಂ ಜವಾಬ್ದಾರಿ :** ಈ ಮೌಲ್ಯವು ಅತ್ಯಂತ ಸತ್ವಯುತವಾದದ್ದು,

ಯಾವುದೇ ಒಂದು ಸಂಸ್ಥೆಯಲ್ಲಿ, ಅಥವ ಒಂದು ಕುಟುಂಬದಲ್ಲೇ ಆಗಲಿ ಅದರ ಅಂಗಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದರೆ ಅದಕ್ಕಿಂತ ಹೆಚ್ಚಿನ ದು ಯಾವುದಿದೇ? 'ಅರಿವಿಗಿಂತ ಮಿಗಿಲುಂಟೆ' ಎಂಬ ವಚನೊಕ್ತಿ ನೆನಪಿಗೆ ಬರುತ್ತದೆ. ಒಂದು ಸಹಕಾರ ಸಂಸ್ಥೆಯಲ್ಲಿ ಸದಸ್ಯರು, ಆಡಳಿತ ಮಂಡಳಿ, ಸಿಬ್ಬಂದಿ ಮೂರು ಅಂಗಗಳು ಭಾಗೀದಾರರು ಇದರೊಡನೆ ಸಂಘದೊಡನೆ ವ್ಯವಹರಿಸುವರು ಸರಬರಾಜುದಾರರು ಇತರರನ್ನು ಭಾಗೀದಾರರೆಂದು ಪರಿಗಣಿಸಬಹುದು. ಈ ಎಲ್ಲ ಭಾಗೀಧಾರರೂ ತಮ್ಮ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳು (Roles and Responsiblities) ಗಳನ್ನು ತಿಳಿದು (ಅರಿತು) ಅದರಂತೆ ನಡೆದು ಕೊಂಡರೆ 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ' ಎಂಬ ವಚನ ಸಾರ್ಥಕ ವಾದಂತೆ ಆಗುತ್ತದೆ.

ಸಹಕಾರ ಸಂಘದ ಯಜಮಾನರು ಸಂಘದ ಸದಸ್ಯರು ಅದರ ಗ್ರಾಹಕರು ಕೂಡ ಅವರೇ ಆಗಿರುತ್ತಾರೆ ಎಂಬುದು ಅದರ ವೈಶಿಷ್ಟ್ಯ. ಸದಸ್ಯರು 'ಸಂಘ ತನಗೇನು ಮಾಡಿದೆ ಎಂಬುದಕ್ಕಿಂತ ತಾನು ಸಂಘಕ್ಕೆ ಏನು ಮಾಡಿರುತ್ತೇನೆ?' ಎಂದು ಪ್ರಶ್ನಿಸಿಕೊಳ್ಳುವುದು ಸೂಕ್ತ. ಸದಸ್ಯ ತನ್ನ ಪಾತ್ರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವುದೆಂದರೆ ತಾನು ಸಂಘದ ಚಟುವಟಿಕೆಗಳಲ್ಲಿ, ಆಗು ಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ಆಗಿದೆ. ಮೊದಲನೆಯದಾಗಿ ಸದಸ್ಯನಿಗೆ ಇರುವ ಹಕ್ಕು ಮತ್ತು ಅವಕಾಶನೆಂದರೆ ತಾನು ಸಾಮಾನ್ಯ ನಿಕಾಯದ ಭಾಗವಾಗಿ ಸಂಘದ ವಾರ್ಷಿಕ ಮತ್ತು ವಿಶೇಷ ಮಾಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ವಾರ್ಷಿಕ ವರದಿ, ಲೆಕ್ಕ ಪರಿಶೋಧನ ವರದಿ, ಯೋಜನೆ ವರದಿ, ಆಯ–ವ್ಯಯ, ಅಂತಿಮ ಲೆಕ್ಕಗಳು, ಇವುಗಳ ಅಧ್ಯಯನ, ಸದಸ್ಯರ, ಆಡಳಿತ ಮಂಡಳಿ, ಸಿಬ್ಬಂದಿ ನೀತಿ ನಡವಳಿಕೆಗಳನ್ನು ರೂಪಿಸುವಲ್ಲಿ ಸಹಕರಿಸುವದು. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ, ಚಿಕಿತ್ಸಕಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಭಾಗಿಯಾಗುವುದು. ಚುನಾವಣೆಯಲ್ಲಿ ಭಾಗವಹಿಸುವುದು. ಮತದಾನ ಮಾಡುವುದು ಪ್ರಜ್ಞಾವಂತ, ಜವಾಬ್ದಾರಿಯತ, ಕ್ರಿಯಾಶೀಲ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು. ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ಅದರ ಸೇವೆ ಮತ್ತು ಸೌಲಭ್ಯಗಳನ್ನು ಬಳಸಿಕೊಳ್ಳುವುದು. ಇದರಿಂದ ಸದಸ್ಯರು ತನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುತ್ತದೆ. ಇದರಂತೆ 'ಸಂಘದ ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಭಾಗವಹಿಸುವಿಕೆ' ಎಂಬುದನ್ನು ಸಹಕಾರ ತತ್ವವಾಗಿ ಪರಿಗಣಿಸಲಾಗಿದೆ. ಇದರ ಪಾಲನೆಯಾಗದೆ ಸಂಘದ ವ್ಯವಹಾರಗಳನ್ನು ಹಿಗ್ಗಿಸಲಾಗುವುದಿಲ್ಲ. ಸಂಘ ಯಶಸ್ಸು ಗಳಿಸಲಾಗುವುದಿಲ್ಲ. ಸಹಕಾರ ಚಳುವಳಿ ಕುಂಟಿತಗೊಳ್ಳುತ್ತದೆ. ಇದರಿಂದಾಗಿ ಕಾಯ್ದೆ ಭಾಗವಾಗಿ ಮತದಾನ ಹಕ್ಕು ಪಡೆಯ ಬೇಕಾದಲ್ಲಿ ಮಹಾಸಭೆಯಲ್ಲಿ ಭಾಗವಹಿಸುವುದು, ಕನಿಷ್ಟ ಸೇವೆ ಸೌಲಭ್ಯ ಪಡೆಯುವುದನ್ನು ಕಡ್ಡಾಯ ಗೊಳಿಸಲಾಗಿರುತ್ತದೆ. ಎಲ್ಲ ಸದಸ್ಯರು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದುಕೊಂಡಲ್ಲಿ ಸಹಕಾರ ಸಂಘಗಳು 'ಸದಸ್ಯ ಚಾಲಿತ' (member driven) ಸಹಕಾರ ಸಂಘಗಳು ನಿರ್ಮಾಣವಾಗುವಲ್ಲಿ ಸಂಶಯವಿಲ್ಲ.

ಆಡಳಿತ ಮಂಡಳಿಯು ಸ್ವಯಂ ಆಗಿ ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ತನ್ನ ಪಾತ್ರವನ್ನು ತಾನು ನಿರ್ವಹಿಸಿದಲ್ಲಿ ಸಹಕಾರ ಸಂಘ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಯೇ ತೀರುತ್ತದೆ. ಸಹಕಾರ ಸಂಘದ ಚುಕ್ಕಾಣಿ ಇರುವುದೇ ಆಡಳಿತ ಮಂಡಳಿಯಲ್ಲಿ. ಆಡಳಿತ ಮಂಡಳಿಯು ತಾನು ಸದಸ್ಯರಿಗೆ, ತನ್ನನ್ನು ಆರಿಸಿ ಆಡಳಿತದ ಜವಾಬ್ದಾರಿಯನ್ನು ವಹಿಸಿರುವ ಸದಸ್ಯರಿಗೆ ಹೊಣೆಗಾರ ಎಂಬುದನ್ನು ಅರಿತು ನಡೆಯುವುದು ಬಹುಮುಖ್ಯ. ತನ್ನ ಆಡಳಿತಾವಧಿಯಲ್ಲಿ ಮಾಡಿದ ಸಾಧನೆಗಳೇನು? ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆಗಳ ಪೂರೈಕೆಗಾಗಿ ತಾನು ತೆಗೆದುಕೊಂಡ ಕ್ರಮಗಳೇನು? ಎಂಬ ಆತ್ಮವಿಮರ್ಶೆ ಅತ್ಯಗತ್ಯ. ಆಡಳಿತ ಮಂಡಳಿ ಸಭೆಗೆ ಹಾಜರಾಗುತ್ತಿದ್ದೇನೆಯೇ? ಸಭೆಗೆ ಪೂರ್ವ ತಯಾರಿಯೊಡನೆ ಹಾಜರಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆಯೇ? ಸಂಘದ ಕಾರ್ಯಾಚರಣೆ ಲಾಭದಾಯಕವಾಗಿ ನಡೆಯುತ್ತಿದೆಯೇ? ಲೆಕ್ಕ ಪತ್ರಗಳು ಸರಿಯಾಗಿ ನಿರ್ವಹಣೆಯಾಗುತ್ತಿದೆಯೇ? ಅಂತಿಮ ಲೆಕ್ಕಗಳ ಫಲಿತಾಂಶಗಳೇನು? ಸಂಘದ ನಿಧಿಗಳ ನಿರ್ವಹಣೆ ಯಾವ ರೀತಿ ಆಗುತ್ತಿದೆ? ಆಸ್ತಿ–ಜವಾಬ್ದಾರಿ ನಿರ್ವಹಣೆ ಹೇಗೆ ನಡೆಯುತ್ತಿದೆ? ಇದರ ಬಗ್ಗೆ ಹಿಮ್ಮಾಹಿತಿ (feed back) (MIS - Monitoring information system) ಪಡೆಯಲಾಗುತ್ತಿದ್ದೆಯೆ?. ಇದರ ಪರಿಶೀಲನೆ ಯಾಗುತ್ತಿದೆಯೇ?

ತಪ್ಪು ಒಪ್ಪುಗಳು ಕಂಡು ಬರುತ್ತಿದ್ದಾವೆಯೇ? ಸೂಕ್ತ ಸರಿಪಡಿಸುವ, ಚಿಕಿತ್ಸಾ ಕ್ರಮಗಳೇನು? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯುವ ಜವಾಬ್ದಾರಿ ಆಡಳಿತ ಮಂಡಳಿ ಯದ್ದಾಗಿರುತ್ತದೆ. ಆಡಳಿತ ಮಂಡಳಿಯು ತನ್ನ ನಿರ್ಧಾರಗಳಲ್ಲಿ ಯಾವುದೇ ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಮಾಡಿಕೊಡದೆ ಪಾರದರ್ಶಕತೆಯಿಂದ ವರ್ತಿಸಿದ್ದಲ್ಲಿ, ತನ್ನ ತೀರ್ಮಾನಗಳು ಎಲ್ಲರನ್ನು ಒಳಗೊಂಡು, ಸಕಲರ ಪಾಲ್ಗೊಳ್ಳುವಿಕೆಯಿಂದ ತೆಗೆದುಕೊಂಡ ತಿರ್ಮಾನವೇ ಆದರೆ ಅದರ ಅನುಷ್ಠಾನವು ಸುಲಭವಾಗುತ್ತದೆ ಮತ್ತು ಯಶಸ್ವಿಯಾಗುತ್ತದೆ. ತೀರ್ಮಾನವು ಮುಂದಾಲೋಚನೆ, ದೂರದಶ್ರಿತ್ವದಿಂದ ಕೂಡಿರಬೇಕು. ಅದರ ಆಗು ಹೋಗುಗಳ (pros-cons) ಬಗ್ಗೆ ಅರಿವಿರಬೇಕು. ಮಿಗಿಲಾಗಿ ತಾವು ಸದಸ್ಯರಿಗೆ (ಮಹಾಸಭೆಗೆ) ಹೊಣೆಗಾರರು ಎಂಬುದನ್ನು ಮರೆಯಲಾಗದು. ಇಂತಹ ಪ್ರಜ್ಞಾವಂತ, ಪ್ರಭುದ್ಧ ಆಡಳಿತ ಮಂಡಳಿ ಅಸ್ತಿತ್ವದಲ್ಲಿದ್ದಲ್ಲಿ ಸಹಕಾರ ಸಂಘ, ಒಟ್ಟಾರೆ ಸಹಕಾರ ಚಳುವಳಿ ಯಶಸ್ವಿಯಾಗುವಲ್ಲಿ ಯಾವುದೇ ಸಂಶಯ ವಿರುವದಿಲ್ಲ.

ಮತ್ತೊಂದು ಪ್ರಮುಖ ಅಂಗ ಮುಖ್ಯ ಕಾರ್ಯನಿರ್ವಹಣಾಧಿ

ಕಾರಿಗಳನ್ನು ಒಳಗೊಂಡಂತೆ ಸಿಬ್ಬಂದಿ ವರ್ಗ. ಸಹಕಾರ ಸಂಘದಲ್ಲಿ ಪ್ರತಿಯೊಬ್ಬ ನೌಕರನು/ಳು ಅತ್ಯಂತ ಪ್ರಮುಖ ವ್ಯಕ್ತಿ. ಅದರಲ್ಲಿ ಮೇಲು ಕೆಳಗೆ ಎಂಬ ಪ್ರಶ್ನೆಯಿಲ್ಲ. ಯಾರೂ ಅಮುಖ್ಯರಲ್ಲ ಆಡಳಿತದ ದೃಷ್ಟಿಯಿಂದ, ಒಂದು ನಿಯಂತ್ರಣ ವ್ಯವಸ್ಥೆಗಾಗಿ ಸಿಬ್ಬಂದಿ ಶ್ರೇಣಿ ನಿರ್ಮಾಣವಾಗುತ್ತಿರುತ್ತದೆ ವಿನಃ ಬೇರೆ ಅಥವ ಅನ್ಯತಾ ಉದ್ದೇಶವಿರುವುದಿಲ್ಲ. ಪ್ರತಿಯೊಬ್ಬ ನೌಕರರು ತಮ್ಮ ತಮ್ಮ ಜವಾಬ್ದಾರಿಗಳನ್ನು ವಹಿಸಿದ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ, ಸಕಾಲದಲ್ಲಿ ನಿರ್ವಹಣೆ ಮಾಡಿದಲ್ಲಿ ಅದಕ್ಕಿಂತ ಮಿಗಿಲಾದ ದೇನಿದೆ. ಸಂಘದ ಕಾರ್ಯಾಚರಣೆ ಸುಸೂತ್ರವಾಗಿ ತಾನೇ ತಾನಾಗಿ ನಡೆಯುತ್ತದೆ. ಸಹಕಾರ ಸಂಘದ ಯಶಸ್ಸು ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಅರಿತ ಸಿಬ್ಬಂದಿಯನ್ನು ಅವಲಂಭಿಸಿರುತ್ತದೆ. ಜ್ಞಾನವುಳ್ಳ, ಕೆಲಸದಲ್ಲಿ ನುರಿತ ಸಿಬ್ಬಂದಿಯಾಗಿದ್ದು, ಸಂಘದ ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆ ಈಡೇರಿಸಬೇಕೆಂಬ ಗುಣಾತ್ಮಕ ಮನೋ ಚಿಂತನೆ ಉಳ್ಳ ವರಾಗಿದ್ದರೆ, ಅವರು ಆಡಳಿತ ಮಂಡಳಿಗೂ ದಿಕ್ಸೂಚಿಯಾಗಿ ವರ್ತಿಸಿ ಸಹಕಾರ ಸಂಘವನ್ನು ಯಶಸ್ವಿಗೊಳಿಸಬಲ್ಲರು ಎಂಬುದು ಸರ್ವಕಾಲಿಕ ಸತ್ಯ.

ಇನ್ನು ಸಂಘದ ಸರಬರಾಜುದಾರರು, ಇನ್ನಿತರ ಸೇವೆ ಸೌಕರ್ಯಗಳನ್ನು ಸಂಘಕ್ಕೆ ಒದಗಿಸುವವರೂ ಸಂಘವು ವಹಿಸಿರುವ ಜವಾಬ್ದಾರಿಯನ್ನು ತಾವು ನಿರ್ವಹಿಸಿದರೆ ಸಂಘದ ಕೆಲಸ ಕಾರ್ಯಗಳು ಸುಲಲಿತವಾಗಿ ನೆರವೇರುತ್ತವೆ. ಸಹಕಾರ ಸಂಘವು ಒಂದು ಯಶಸ್ವಿ ಸಹಕಾರ ಸಂಘ ಎಂದೆನಿಸಿಕೊಳ್ಳುತ್ತದೆ.

**(3) ಪ್ರಜಾಪ್ರಭುತ್ವ :** ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಸಂಸ್ಥೆಗಳು. ಪ್ರಜ್ಞಾವಂತ ಜವಾಬ್ದಾರಿಯುತ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು ಪ್ರಜ್ಞಾವಂತ ಸದಸ್ಯರ ಜವಾಬ್ದಾರಿ ಯಾಗಿರುತ್ತದೆ. ಅತ್ಯುತ್ತಮ ನಾಯಕತ್ವ ಗುಣಗಳ ಬೆಳವಣಿಗೆಗೆ ಸಹಕಾರ ಸಂಸ್ಥೆಗಳು ಅವಕಾಶ ಒದಗಿಸುತ್ತವೆ. ಈ ಸಂಸ್ಥೆಗಳಲ್ಲಿ ಕೇವಲ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲದೇ ಸಂಸ್ಥೆಗಳು ಔದ್ಯೋಗಿಕ ಸಂಸ್ಥೆಗಳಾಗಿರುವುದರಿಂದ ವ್ಯವಹಾರಿಕ ಅಂಶಗಳು ಮೇ ಳೈ ಸಿರುವುದರಿಂದ ವ್ಯವಹಾರಿಕ ಜ್ಞಾನ, ಕೌಶಲ್ಯಗಳ ಕಲಿಕೆಗೆ ಸದಾವಕಾಶ ದೊರೆಯುತ್ತದೆ. ಪ್ರಜಾಪ್ರಭುತ್ವ ಮತ್ತು ನಾಯಕತ್ವ ಎರೆಡೂ ಅವಿಭಾಜ್ಯ ಶ್ರೇಷ್ಠ ನಾಯಕತ್ವವಿಲ್ಲದೇ ಪ್ರಜಾಪ್ರಭುತ್ವ ಬೆಳೆಯಲಾರದು ಅದರಂತೆ ಪ್ರಜಾಪ್ರಭುತ್ವ ಆಧರಿತ ಸಹಕಾರ ಸಂಸ್ಥೆಗಳು. 'ತಥಾ ರಾಜಾ ತಥಾ ಪ್ರಜಾ' ಅಲ್ಲ ಪ್ರಜಾಪ್ರಭುತ್ವದಲ್ಲಿ 'ತಥಾ ಪ್ರಜಾ ತಥಾ ರಾಜ' ಎಂಬುದನ್ನು ಒಪ್ಪಿಕೊಳ್ಳಬೇಕು. ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ಹೇಗೆ ಮುಖ್ಯವೋ ಹಾಗೆ ಸಹಕಾರ ಸಂಘಗಳಲ್ಲಿ ಸದಸ್ಯರು ಮುಖ್ಯರು, ಅವರೇ 'ಸದಸ್ಯ ಚಾಲಿತ ಸಹಕಾರ ಸಂಘ'ವನ್ನು ರೂಪಿಸ ಬಲ್ಲರು.

**(4) ಸಮಾನತೆ, ಬಂಡವಾಳ, ಒಗ್ಗಟ್ಟು :** ಈ ಸಹಕಾರ ಮೌಲ್ಯಗಳ ಪಾಲನೆ ಸಹಕಾರ ಸಂಘಗಳ ಸರ್ವೋತ ಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಸಹಕಾರ ಸಂಘದಲ್ಲಿ ಸದಸ್ಯರಲ್ಲರೂ ಸಮಾನರು.

ಕೆಲವರು ಹೆಚ್ಚು ಸಮಾನರು ಕೆಲವರು ಕಡಿಮೆ ಸಮಾನರು ಎಂಬ ಪ್ರಶ್ನೆ ಉದ್ಭವಿಸಬಾರದು. ಸಹಕಾರ ಸಂಘಕ್ಕೆ ಸದಸ್ಯರಾದ ನಂತರ ಸಹಕಾರ ಸಂಘದಲ್ಲಿ ಅವರೆಲ್ಲರೂ ಸಮಾನರು, ಒಬ್ಬ ಸದಸ್ಯ ಎಷ್ಟೇ ಷೇರು ಹೊಂದಿದ್ದರೂ ಅವರಿಗೆ ಇರುವುದು ಒಂದೇ ಮತ. ಸಮಾನತೆ, ಸಮಾನ ಮನಸ್ಕರು, ಸಮಾನ ಚಿಂತನೆ ಅತಿ ಅವಶ್ಯ. ಭಿನ್ನಮತ ಸರ್ವೇ ಸಾಮಾನ್ಯ ಆದರೆ ಚಿಂತನ ಮಂಥನ ನಡೆದು ಸದಸ್ಯರ ಒಳಿತಿಗಾಗಿ ಅತ್ಯುತ್ತಮ ತೀರ್ಮಾನ ತೆಗೆದುಕೊಳ್ಳಬೇಕು. ಎಲ್ಲರೂ ಸಮಾನರು ಎನ್ನುವ ಮನೋಭಾವನೆ, ಚಿಂತನೆ, ಸಹಕಾರ ಸಂಘದ ಯಶಸ್ವಿ ಕಾರ್ಯಾ ಚರಣೆ ದೃಷ್ಟಿಯಿಂದ ಅತಿ ಅವಶ್ಯ.

ಬಂಡವಾಳವಿಲ್ಲದೇ ಯಾವುದೇ ವ್ಯವಹಾರ ಮಾಡಲಾಗುವುದಿಲ್ಲ. ಬಂಡವಾಳವಿಲ್ಲದಿದ್ದಲ್ಲಿ 'ಬಂಡವಾಳವಿಲ್ಲದ ಬಡಾಯಿ' ಟಿ.ಪಿ. ಕೈಲಾಸಂ ರವರ ನಾಟಕದ ತಾಗುತ್ತದೆ. ಅದರಲ್ಲಿಯೂ ಸಹಕರ ಸಂಘದಲ್ಲಿನ ಬಂಡವಾಳ ಒಂದು ರೀತಿ ಮೌಲ್ಯವರ್ಧಿತ ಬಂಡವಾಳ (equity) ಅದರಲ್ಲಿ ಪ್ರೀತಿ, ಪ್ರೇಮ, ನಮ್ಮ ಸಂಘ ನಮ್ಮದು ಮುಖಭಾವ, ಶ್ರಮ, ಕಷ್ಟಪಟ್ಟು ಗಳಿಸಿದ ಗಳಿಕೆ ಅಂಶಗಳು ಮೇಳೈಸಿದೆ. ಹಾಗಾಗಿ ಇದರ ಮಹತ್ವ ಅತಿ ಹೆಚ್ಚಿನದು. ಬಂಡವಾಳ ಕ್ರೌಡೀಕರಣ, ಬಂಡವಾಳಕ್ಕೆ ಬಂಡವಾಳದ ಸೇರ್ಪಡೆ, ಉಳಿಕೆ, ಅದರ ವಿವೇಚನಯುತ ವ್ಯವಹಾರ ಹೂಡಿಕೆ ಬಹು ಮುಖ್ಯ ವಿಚಾರವಾಗುತ್ತದೆ. ಒಗ್ಗಟ್ಟು (solidarity) ಯಾವುದೇ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಂತೆ ಸಹಕಾರ ಸಂಘದಲ್ಲಿಯೂ ಕೂಡ. ಪಟ್ಟಭದ್ರ ಹಿತಾಸಕ್ತಿಗಳು, ಸಂಘಟನೆಯನ್ನು ಒಡೆಯಲು ಸದಾ ಹವಣಿಸುತ್ತಿರುತ್ತವೆ. ಸಹಕಾರ ಸಂಘವು ಈ ವಿಷಯಗಳಲ್ಲಿ ಅತಿ ಎಚ್ಚರಿಕೆ ಇಂದ ಇರತಕ್ಕದ್ದು. ಅನೇಕವೇಳೆ ಬಾಹ್ಯದಿಂದ ಅಲ್ಲದೇ ಆಂತರಿಕವಾಗಿ ನುಸುಳಿ ಯಶಸ್ವಿ ಕಾರ್ಯಾಚರಣೆಗೆ ಧಕ್ಕೆ ತರುವ, ಹಾಳುಗೆಡಹುವ ಕೆಲಸ ಮಾಡುತ್ತವೆ. ಇಂತಹ ದುಷ್ಟ ಶಕ್ತಿಗಳ ವಿರುದ್ಧ ಸಹಕಾರ ಸಂಘದ ಭಾಗೀದಾರರೆಲ್ಲರೂ ಒಗ್ಗೂಡಿ ಕಾರ್ಯವೆಸುಗುವ ಶಕ್ತಿಯನ್ನು ಹೊಂದಿರ ಬೇಕು. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದನ್ನು ಅರಿತು ಸಾಬೀತು ಪಡೆಸಬೇಕು.

ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯು ವಿಶ್ವಾದ್ಯಂತ ಸಹಕಾರ ಸಂಘಗಳನ್ನು ಅಧ್ಯಯನ ಮಾಡಿ ಈ ಮೇಲಿನ ಸಹಕಾರ ಮೌಲ್ಯಗಳನ್ನು ರೂಪಿಸಿದೆ. ಇವುಗಳ ಅಳವಡಿಕೆಯಿಂದ ಸಹಕಾರಿಗಳು ಯಶಸ್ವಿ ಸಹಕಾರ ಸಂಘಗಳನ್ನು ಕಟ್ಟಿ ಉಳಿಸಿ ಬೆಳೆಸುತ್ತಾರೆ ಎಂಬುದು ಸದಾಶಯವೇ ಸರಿ.

**'ಇವನಾರವ, ಇವನಾರವ, ಇವನಾರವನೆಸದಿರಯ್ಯಾ**
**ಇವ ನಮ್ಮವ, ಇವನಮ್ಮವ, ಇವ ನಮ್ಮವನೆಂದಿನಿಸಯ್ಯಾ'**
**ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ'**

**– ಬಸವಣ್ಣ**

ಸಹಕಾರಂ ಗೆಲ್ಗೆ, ಸಹಕಾರಂ ಬಾಳ್ಗೆ



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

**ಗ್ರಾಹಕರೆಂದರೆ ಯಾರು ಎಂಬ ಬಗ್ಗೆ ಬಹಳ ಹಿಂದಿನಿಂದಲೂ ನ್ಯಾಯಾಲಯಗಳು ಬಗೆಬಗೆಯಾಗಿ ವಿವರಿಸುತ್ತಿವೆಯಾದರೂ ಬ್ಯಾಂಕ್ ಗ್ರಾಹಕರ ಸ್ವರೂಪ ಬದಲಾಗುತ್ತಿರುವುದರಿಂದ ಖಚಿತವಾದ ಕಾನೂನಿಕ ವ್ಯಾಖ್ಯೆ ಇದೆಯೆನ್ನುವಂತಿಲ್ಲ. ಸಾಮಾನ್ಯವಾಗಿ ಗ್ರಾಹಕನ ಮತ್ತು ಬ್ಯಾಂಕರನ ನಡುವೆ ಅಂಗೀಕೃತ ವ್ಯವಹಾರವಿದ್ದು ಪದೇ ಪದೇ ವಹಿವಾಟುಗಳು ನಡೆಯಬೇಕು. ಒಬ್ಬ ವ್ಯಕ್ತಿ ಬ್ಯಾಂಕಿನ ಗ್ರಾಹಕನೆನಿಸಿಕೊಳ್ಳಬೇಕಾದರೆ ಅವನು ಬ್ಯಾಂಕಿನಲ್ಲಿ ಒಂದು ಠೇವಣಿ ಖಾತೆಯನ್ನು ಹೊಂದಿದ್ದು ಅದರಲ್ಲಿ ನಿರ್ದಿಷ್ಟ ಪ್ರಮಾಣದ ಹಣವನ್ನು ಇಟ್ಟಿರಬೇಕು. ಈ ಕಾನೂನಿಕ ವ್ಯಾಖ್ಯೆ ಏನೇ ಇರಲಿ, ಬ್ಯಾಂಕಿನ ಸೇವೆಗಳ ದೃಷ್ಟಿಯಿಂದ ಬ್ಯಾಂಕುಗಳಲ್ಲಿ ಯಾವುದೇ ರೀತಿಯ ವ್ಯವಹಾರ ಮಾಡುವವರು ಗ್ರಾಹಕರೆಂದು ಪರಿಗಣಿಸಲ್ಪಡುತ್ತಾರೆ. ಖಾತೆ ಹೊಂದಿರಬೇಕಾದ ಅಗತ್ಯವಿಲ್ಲ. ಮಾರಾಟಗಾರಿಕೆಯ ದೃಷ್ಟಿಯಿಂದಲಂತೂ ಎಲ್ಲರೂ ಗ್ರಾಹಕರೇ ಆಗುತ್ತಾರೆ, ಹಾಲಿ ಅಥವಾ ಭಾವೀ ಗ್ರಾಹಕರು!**

...ಹಿಂದಿನ ಸಂಚಿಕೆಯಿಂದ

### ಕೃಷಿಯೇತರ ಪತ್ತಿನ ಸಹಕಾರ ಸಂಘಗಳು (Non Agricultural Credit Co-op Societies)

ಭಾರತದಲ್ಲಿ ಸಹಕಾರ ಚಳುವಳಿ ಆರಂಭವಾದದ್ದು ರೈತರಿಗೆ ಸಹಕಾರ ಸಂಘಗಳ ಮೂಲಕ ಕೃಷಿ ಸಾಲಗಳನ್ನು ನೀಡಿ ಲೇವಾದೇವಿದಾರರಿಂದ ಆಗುತ್ತಿದ್ದ ಶೋಷಣೆಯಿಂದ ಅವರನ್ನು ಮುಕ್ತಿಗೊಳಿಸಬೇಕೆಂಬ ಉದ್ದೇಶದಿಂದ ಹೀಗಾಗಿ ಆರಂಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು.

ಕೃಷಿಯೇತರ ಪತ್ತಿನ ಸಂಘಗಳು ಎಂದರೆ ಕೃಷಿ ಹೊರತಾದ ಉದ್ದೇಶಗಳಿಗೆ ಸಾಲ ಸೌಲಭ್ಯಗಳನ್ನು ನೀಡುವ ಸಹಕಾರ ಸಂಘಗಳು. ಇವು ಪ್ರಾಥಮಿಕ ಸಹಕಾರ ಸಂಸ್ಥೆಗಳಾಗಿರುತ್ತವೆ. ಅಂದರೆ ಇವುಗಳಲ್ಲಿ ವ್ಯಕ್ತಿಗತ ಸದಸ್ಯತ್ವಕ್ಕೆ ಮಾತ್ರ ಅವಕಾಶವಿರುತ್ತದೆ. ಇಂತಹ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಸ್ಥಾಪನೆಗೆ ಚಳುವಳಿ ಆರಂಭದಲ್ಲಿ ಉತ್ತೇಜನ ದೊರೆಯದಿದ್ದರು ತದನಂತರದ ವರ್ಷಗಳಲ್ಲಿ ಪ್ರೋತ್ಸಾಹ ದೊರೆತಿರುತ್ತದೆ. ಪಟ್ಟಣ ಮತ್ತು ನಗರ ಪ್ರದೇಶಗಳ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ವಾಣಿಜ್ಯ ಬ್ಯಾಂಕುಗಳಿಂದ ಸಾಲದ ಭದ್ರತೆ, ಸಾಲದ ವಸೂಲಾತಿ ಸಮಸ್ಯೆ ಇತ್ಯಾದಿ ಸಮಸ್ಯೆಗಳ ಆಧಾರದ ಮೇಲೆ ಸಾಲಗಳು ದೊರೆಯುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಪಟ್ಟಣ ಮತ್ತು ನಗರ ಪ್ರದೇಶಗಳ ಬಡವರು, ಮಧ್ಯಮ ವರ್ಗದವರು, ವರ್ತಕರು, ವೇತನದಾರರು, ಕುಶಲ ಕರ್ಮಿಗಳು, ಇತ್ಯಾದಿ ಜನರಿಗೆ ಸಾಲದ ಅಗತ್ಯತೆ ಮತ್ತು ಬೇಡಿಕೆ ಉಂಟಾದ ಹಿನ್ನಲೆಯಲ್ಲಿ ಜರ್ಮನಿಯ ಷೂಲ್ಸ್ ಮಾದರಿಯ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಲಾಯಿತು. ಕ್ರಮೇಣವಾಗಿ ಭಾರತದ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಸ್ಥಾಪನೆ ಆಗಲಾರಂಭಿಸಿದವು. ಇವುಗಳಲ್ಲಿ ಕೆಳಕಂಡ ವಿಧಗಳಿರುತ್ತವೆ.

**1. ಪತ್ತಿನ ಸಹಕಾರ ಸಂಘಗಳು :** ಇವುಗಳು ಸದಸ್ಯರಿಗೆ ಮುಖ್ಯವಾಗಿ ವ್ಯಾಪಾರಕ್ಕೆ, ಗೃಹ ನಿರ್ಮಾಣಕ್ಕೆ, ನಿವೇಶನ ಖರೀದಿಗೆ, ಗುಡಿ ಕೈಗಾರಿಕೆಗೆ ಇತ್ಯಾದಿ ಕೃಷಿಯೇತರ ಉದ್ದೇಶವುಳ್ಳ ವ್ಯವಹಾರಗಳಿಗೆ ಸಾಲಗಳನ್ನು ನೀಡುತ್ತವೆ. ಈ ಸಂಘಗಳು ಸದಸ್ಯರಿಂದ ಠೇವಣಿಗಳನ್ನು ಸಂಗ್ರಹಿಸುತ್ತವೆ. ಇವುಗಳ ದುಡಿಯುವ ಬಂಡವಾಳವು ಷೇರುಧನ, ಸ್ವಂತ ನಿಧಿಗಳು, ಠೇವಣಿಗಳು ಮತ್ತು ಬ್ಯಾಂಕುಗಳಿಂದ ಪಡೆಯುವ ಸಾಲಗಳಿಂದ ಕೂಡಿರುತ್ತದೆ. ಇವುಗಳ ಆಡಳಿತವು ಪ್ರಜಾಸತ್ತಾತ್ಮಕ ವಿಧಾನದಿಂದ ಕೂಡಿರುತ್ತದೆ. ಸಂಘದ ಆಡಳಿತವನ್ನು ನಡೆಸಲು ಸದಸ್ಯರು ಚುನಾವಣೆ ಮೂಲಕ ಆಡಳಿತ ಮಂಡಳಿಯ ಸದಸ್ಯರನ್ನು ಸಹಕಾರ ಕಾಯ್ದೆ ಮತ್ತು ಬೈಲಾ ನಿಯಮಾನುಸಾರ ಚುನಾಯಿಸುತ್ತಾರೆ. ಹೀಗೆ ಚುನಾವಣೆಯಾದ ಆಡಳಿತ ಮಂಡಳಿ ಸದಸ್ಯರು ತಮ್ಮೊಳಗಿನಿಂದ ಅಧ್ಯಕ್ಷರು, ಉಪಾಧ್ಯಕ್ಷರು ಇತ್ಯಾದಿ ಪದಾಧಿಕಾರಿಗಳನ್ನು ಆಯ್ಕೆ ಮಾಡುತ್ತಾರೆ. ಮುಖ್ಯ ಕಾರ್ಯನಿರ್ವಾಹಕ ಹಾಗೂ ಇತರೆ ಸಿಬ್ಬಂದಿ ಸಂಘದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ರಾಜ್ಯದಲ್ಲಿ ಒಟ್ಟು 2479 ಕಾರ್ಯನಿರತ ಪತ್ತಿನ ಸಂಘಗಳಿರುತ್ತವೆ.

**2. ವೇತನದಾರರ / ನೌಕರರ ಪತ್ತಿನ ಸಹಕಾರ ಸಂಘಗಳು :** ಸರ್ಕಾರದ ಇಲಾಖೆಗಳ, ಖಾಸಗಿ ಸಂಸ್ಥೆಗಳ, ಬ್ಯಾಂಕುಗಳ, ಕಾರ್ಖಾನೆಗಳ, ಶಾಲಾ–ಕಾಲೇಜುಗಳ, ಇತ್ಯಾದಿ ಸಂಸ್ಥೆಗಳ ನೌಕರರು ಇಂತಹ ಸಹಕಾರ ಸಂಘಗಳನ್ನು ತಮಗೆ ಅಗತ್ಯವಿರುವ ಸಾಲ ಸೌಲಭ್ಯಗಳನ್ನು ಪಡೆದುಕೊಳ್ಳುವ ಉದ್ದೇಶದಿಂದ ಸ್ಥಾಪಿಸಿಕೊಳ್ಳುತ್ತಾರೆ. ವೇತನಾಧಾರಿತ ಸಾಲ ಪಡೆಯುವ ನೌಕರರ ಸಾಲಗಳನ್ನು ಉದ್ಯೋಗದಾತ ಸಂಸ್ಥೆಯು

ವೇತನದಿಂದ ಕಡಿತ ಮಾಡಿ ಸಹಕಾರ ಸಂಘಕ್ಕೆ ವರ್ಗಾಯಿಸುತ್ತದೆ. ಇಂತಹ ಪ್ರಕ್ರಿಯೆಗೆ ಸಹಕಾರ ಸಂಘಗಳ ಕಾಯ್ದೆ ಕಲಂ 34ರಡಿಯಲ್ಲಿ ಸ್ಪಷ್ಟ ಅವಕಾಶವಿರುತ್ತದೆ. ದುಡಿಯುವ ಬಂಡವಾಳ ಮತ್ತು ಸಂಘದ ಆಡಳಿತದ ಬಗ್ಗೆ ಕ್ರಮಸಂಖ್ಯೆ 1ರಲ್ಲಿ ನಮೂದಿಸಲಾದ ಅಂಶಗಳು ಇದಕ್ಕೂ ಅನ್ವಯಿಸುತ್ತದೆ. ರಾಜ್ಯದಲ್ಲಿ ಒಟ್ಟು 1049 ಕಾರ್ಯನಿರತ ನೌಕರರ ಪತ್ತಿನ ಸಂಘಗಳಿರುತ್ತವೆ.

**3. ಪಟ್ಟಣ ಸಹಕಾರ ಬ್ಯಾಂಕುಗಳು (Urban Co-Operative Banks) :** ಈ ಬ್ಯಾಂಕುಗಳು ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ನೊಂದಣಿ ಆಗಿರುವುದರ ಜೊತೆಗೆ ಆರ್‌ಬಿಐನಿಂದ ಬ್ಯಾಂಕಿಂಗ್ ರೆಗ್ಯೂಲೇಷನ್ ಆಕ್ಟ್ 1949ರ ಅಡಿಯಲ್ಲಿ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲು ಅನುಮತಿ ಪಡೆದುಕೊಂಡಿರುತ್ತದೆ. ಸಹಕಾರ ಇಲಾಖೆ ಮತ್ತು ಆರ್‌ಬಿಐ ಎರಡರ ವ್ಯಾಪ್ತಿಗೂ ಇವು ಒಳಪಡುತ್ತವೆ. ಇವುಗಳ ತನಿಖೆಯನ್ನು ವಾರ್ಷಿಕವಾಗಿ ಆರ್‌ಬಿಐ ನಡೆಸುವುದರ ಜೊತೆಗೆ ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ ಮಾರ್ಗದರ್ಶನ ನೀಡುತ್ತದೆ ಮತ್ತು ಮೇಲ್ವಿಚಾರಣೆ ನಡೆಸುತ್ತದೆ.

ಈ ಬ್ಯಾಂಕುಗಳು ಸದಸ್ಯರಿಗೆ ವೇತನಾಧಾರಿತ, ಚಿನ್ನ ಗಿರವಿ, ನಿವೇಶನ ಖರೀದಿ, ಗೃಹ ನಿರ್ಮಾಣ, ವಿದ್ಯಾಭ್ಯಾಸ, ಇತ್ಯಾದಿ ವಿವಿಧ ಬಗೆಯ ಸಾಲ ಸೌಲಭ್ಯಗಳನ್ನು ಒದಗಿಸುತ್ತವೆ. ಸದಸ್ಯರಿಂದ ವಿವಿಧ ಬಗೆಯ ಠೇವಣಿಗಳನ್ನು ಸಂಗ್ರಹಿಸುತ್ತವೆ. ಬ್ಯಾಂಕಿನ ಸದಸ್ಯರು ಮತ್ತು ಸಾರ್ವಜನಿಕರಿಗೆ ಬ್ಯಾಂಕಿಂಗ್ ಸೌಕರ್ಯಗಳನ್ನು ಒದಗಿಸುತ್ತವೆ. ಬ್ಯಾಂಕುಗಳ ದುಡಿಯುವ ಬಂಡವಾಳವು ಸದಸ್ಯರಿಂದ ಪಾವತಿಯಾದ ಷೇರುಧನ, ಸ್ವಂತ ನಿಧಿಗಳು, ಠೇವಣಿಗಳು ಇತ್ಯಾದಿಗಳಿಂದ ಕೂಡಿರುತ್ತದೆ. ಇವುಗಳ ಆಡಳಿತವು ಪ್ರಜಾಪ್ರಭುತ್ವ ವಿಧಾನದಿಂದ ಕೂಡಿದ್ದು ಸಹಕಾರ ಸಂಘಗಳ ಕಾಯ್ದೆ ಮತ್ತು ಬೈಲಾ ನಿಯಮಗಳಿಗನುಸಾರ ಆಡಳಿತ ಮಂಡಳಿಯ ರಚನೆ ಹಾಗೂ ಪದಾಧಿಕಾರಿಗಳ ಆಯ್ಕೆ ಏರ್ಪಡುತ್ತದೆ. ಸಂಘದ ಕೆಲಸಕಾರ್ಯಗಳನ್ನು ನಿರ್ವಹಿಸಲು ಬ್ಯಾಂಕಿನ ಆಡಳಿತ ಮಂಡಳಿಯು ಅಧಿಕಾರಿ ಸಿಬ್ಬಂಧಿಗಳನ್ನು ಕಾನೂನಿನ ಪ್ರಕಾರ ನೇಮಿಸಿಕೊಳ್ಳುತ್ತದೆ.

ಪಟ್ಟಣ ಸಹಕಾರ ಬ್ಯಾಂಕುಗಳು ರಾಜ್ಯಮಟ್ಟದಲ್ಲಿ ತಮ್ಮದೇ ಆದ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಸಂಸ್ಥೆಯನ್ನು ಸ್ಥಾಪಿಸಿಕೊಂಡಿರುತ್ತವೆ.

## ಬ್ಯಾಂಕಿಂಗ್ – ಕೆಲವು ಟಿಪ್ಪಣಿಗಳು

### ಬ್ಯಾಂಕು ಮತ್ತು ಗ್ರಾಹಕ

ಬ್ಯಾಂಕಿಂಗ್ ನಿಯಮ ಅಧಿನಿಯಮದ (BR Act) 5 (ಬಿ), (ಸಿ) ಮತ್ತು 6ನೇ ಪ್ರಕರಣಗಳ ಮೇರೆಗೆ ಸಾಲ ನೀಡುವುದಕ್ಕೆ ಸಾರ್ವಜನಿಕರಿಂದ (ಉಳಿತಾಯ/ಚಾಲ್ತಿ ಅಥವಾ ಸ್ಥಿರ) ಠೇವಣಿಗಳನ್ನು ಸ್ವೀಕರಿಸಿ ಗ್ರಾಹಕರು ಕೇಳಿದಾಗ ಚೆಕ್ ಅಥವಾ ಬೇರೆ ವಿಧಾನದಿಂದ ಹಣವನ್ನು ಮರಳಿಕೊಡುವ ಕಾರ್ಯದಲ್ಲಿ ಪ್ರವೃತ್ತವಾದ ಸಂಸ್ಥೆಗಳೇ ಬ್ಯಾಂಕುಗಳು. ಈ ವ್ಯವಹಾರ ಮಾಡುವವರು ಬ್ಯಾಂಕರರು.

ಠೇವಣಿಗಳನ್ನು ಸ್ವೀಕರಿಸಿ ಠೇವಣಿ ಪತ್ರವನ್ನು ಕೊಟ್ಟು ಅವಧಿಯ ನಂತರ ಬಡ್ಡಿ ಮತ್ತು ಠೇವಣಿಗಳನ್ನು ಮರಳಿಸುವ ಸಂಸ್ಥೆಗಳೆಲ್ಲ ಬ್ಯಾಂಕುಗಳಲ್ಲ. ಅನೇಕ ಕಂಪನಿಗಳು, ಹಣಕಾಸು ಸಂಸ್ಥೆಗಳು ಈ ಕಾರ್ಯವನ್ನು ಮಾಡುತ್ತವೆ; ಅವು ಬ್ಯಾಂಕ್ ಎನಿಸುವುದಿಲ್ಲ. ಕೆಲವು ವ್ಯಾಪಾರಿ ಸಂಸ್ಥೆಗಳು ತಮ್ಮೆಲ್ಲಕೊಳ್ಳುವ ಪದಾರ್ಥಗಳಿಗೆ ಸಾಲಗಳನ್ನಿತ್ತು ಬ್ಯಾಂಕಿನಂತೆ ಕಾರ್ಯನಿರ್ವಹಿಸುತ್ತವೆ. ಆದರೆ ಸಾಲ ನೀಡುವ ಸಂಸ್ಥೆಗಳೆಲ್ಲ ಬ್ಯಾಂಕುಗಳಲ್ಲ. ಕೆಲವು ಖಾಸಗಿ ವ್ಯಕ್ತಿಗಳು ಬ್ಯಾಂಕುಗಳು ಒದಗಿಸುವಂತೆ ಭದ್ರತಾ ಕೋಶಗಳನ್ನು ಒದಗಿಸುವ ವ್ಯವಹಾರ ಮಾಡುತ್ತಾರೆ. ಇವರು ಬ್ಯಾಂಕರರಲ್ಲ.

ಗ್ರಾಹಕರೆಂದರೆ ಯಾರು ಎಂಬ ಬಗ್ಗೆ ಬಹಳ ಹಿಂದಿನಿಂದಲೂ ನ್ಯಾಯಾಲಯಗಳು ಬಗೆಬಗೆಯಾಗಿ ವಿವರಿಸುತ್ತಿವೆಯಾದರೂ ಬ್ಯಾಂಕ್ ಗ್ರಾಹಕರ ಸ್ವರೂಪ ಬದಲಾಗುತ್ತಿರುವುದರಿಂದ ಖಚಿತವಾದ ಕಾನೂನಿಕ ವ್ಯಾಖ್ಯೆ ಇದೆಯೆನ್ನುವಂತಿಲ್ಲ. ಸಾಮಾನ್ಯವಾಗಿ ಗ್ರಾಹಕನ ಮತ್ತು ಬ್ಯಾಂಕರನ ನಡುವೆ ಅಂಗೀಕೃತ ವ್ಯವಹಾರವಿದ್ದು ಪದೇ ಪದೇ ವಹಿವಾಟುಗಳು ನಡೆಯಬೇಕು. ಒಬ್ಬ ವ್ಯಕ್ತಿ ಬ್ಯಾಂಕಿನ ಗ್ರಾಹಕನೆನಿಸಿಕೊಳ್ಳಬೇಕಾದರೆ ಅವನು ಬ್ಯಾಂಕಿನಲ್ಲಿ ಒಂದು ಠೇವಣಿ ಖಾತೆಯನ್ನು ಹೊಂದಿದ್ದು ಅದರಲ್ಲಿ ನಿರ್ದಿಷ್ಟ ಪ್ರಮಾಣದ ಹಣವನ್ನು ಇಟ್ಟಿರಬೇಕು. ಈ ಕಾನೂನಿಕ ವ್ಯಾಖ್ಯೆ ಏನೇ ಇರಲಿ, ಬ್ಯಾಂಕಿನ ಸೇವೆಗಳ ದೃಷ್ಟಿಯಿಂದ ಬ್ಯಾಂಕುಗಳಲ್ಲಿ ಯಾವುದೇ ರೀತಿಯ ವ್ಯವಹಾರ ಮಾಡುವವರು ಗ್ರಾಹಕರೆಂದು ಪರಿಗಣಿಸಲ್ಪಡುತ್ತಾರೆ. ಖಾತೆ ಹೊಂದಿರಬೇಕಾದ ಅಗತ್ಯವಿಲ್ಲ. ಮಾರಾಟಗಾರಿಕೆಯ ದೃಷ್ಟಿಯಿಂದಲಂತೂ ಎಲ್ಲರೂ ಗ್ರಾಹಕರೇ ಆಗುತ್ತಾರೆ, ಹಾಲಿ ಅಥವಾ ಭಾವೀ ಗ್ರಾಹಕರು!

ಬ್ಯಾಂಕಿನಲ್ಲಿ ಗ್ರಾಹಕನು ಹಣವನ್ನು ಠೇವಣಿ ಇರಿಸಿದ್ದಾಗ ಬ್ಯಾಂಕರನು ಸಾಲಗಾರನಾಗುತ್ತಾನೆ (debtor) ಮತ್ತು ಠೇವಣಿದಾರನಾದ ಗ್ರಾಹಕನು ಸಾಲಿಗನಾಗುತ್ತಾನೆ (creditor). ಬ್ಯಾಂಕರ್ ಹಣವನ್ನು ಸ್ವೀಕರಿಸಿದ ಮೇಲೆ ನಿಕ್ಷೇಪಿತ (bailee) ಅಥವಾ ನ್ಯಾಸಧಾರಿ (trustee) ಅಥವಾ ಪ್ರತಿನಿಧಿ ಆಗುವುದಿಲ್ಲ. ಒಪ್ಪಿಗೆಯ ಪ್ರಕಾರ ವಿಲೇವಾರಿ ಮಾಡಲು ಸ್ವತ್ತನ್ನು ವಶಕ್ಕೆ ತೆಗೆದುಕೊಂಡವನು 'ನಿಕ್ಷೇಪಿತ' ಎನಿಸುತ್ತಾನೆ. ಠೇವಣಿ ಸ್ವೀಕರಿಸಿದ ಬ್ಯಾಂಕರನು ಕೇವಲ ಸಾಲಗಾರನಾಗುತ್ತಾನೆ. ಏಕೆಂದರೆ, ಅವನು ಗ್ರಾಹಕನು ಕೊಟ್ಟ ಹಣವನ್ನು ಅವನು ತೆಗೆದುಕೊಂಡ ಹಾಗೆಯೇ ಕಾದಿಟ್ಟು ಮರಳಿ ಆ ಗ್ರಾಹಕನಿಗೆ ಕೊಡುವುದಿಲ್ಲ. ಅವನು ಆ ಹಣವನ್ನು ಬಳಸಿಕೊಂಡು, ಅವಧಿ ಮುಗಿದಾಗ ಬೇರೆಯೇ ಹಣವನ್ನು ನೀಡುತ್ತಾನೆ. ಆದ್ದರಿಂದ ಬ್ಯಾಂಕರ್ ಹಣವನ್ನು ಒತ್ತೆಯಿಟ್ಟುಕೊಳ್ಳುವವ (Pledgee) ಎಂದಾಗುವುದಿಲ್ಲ. ಗ್ರಾಹಕನು ಬ್ಯಾಂಕಿನಲ್ಲಿ ಲಾಕರ್ ಖಾತೆಯೊಂದನ್ನು ಹೊಂದಿದ್ದರೆ ಗ್ರಾಹಕನು ಬಾಡಿಗೆದಾರನಾಗಿ (Lessee) ಬ್ಯಾಂಕರನು ಬಾಡಿಗೆಗೆ ನೀಡಿದವನಾಗಿಯೂ (Lessor) ಪರಿಗಣಿಸಲ್ಪಡುತ್ತಾರೆ. ಚೆಕ್, ಡ್ರಾಫ್ಟ್ ಮುಂತಾದ ಸಂಲೇಖಗಳ ವಸೂಲಿಯ ಸಂದರ್ಭದಲ್ಲಿ ಬ್ಯಾಂಕರ್–ಗ್ರಾಹಕ ಸಂಬಂಧವು ಏಜೆಂಟ್–ಪ್ರಿನ್ಸಿಪಲ್ ಸ್ವರೂಪದ್ದಾಗಿರುತ್ತದೆ.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘಗಳ ಸದಸ್ಯರಿಗೆ, ನಿರ್ದೇಶಕರಿಗೆ, ಪದಾಧಿಕಾರಿಗಳಿಗೆ, ನೌಕರರು/ಅಧಿಕಾರಿಗಳಿಗೆ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆ ನೀಡುವ ಹೊಣೆಗಾರಿಕೆ ಹೊಂದಿರುವ ಸಂಸ್ಥೆ ................**

ಎ) ಸರ್ಕಾರ

ಬಿ) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್

ಸಿ) ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ

ಡಿ) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಲ

**2. ಸಹಕಾರ ಸಂಘವು ತನ್ನ ಸಹಕಾರ ಶಿಕ್ಷಣ ನಿಧಿಯನ್ನು ................. ಸಂಸ್ಥೆಗೆ ಪಾವತಿಸುವುದು ಕಡ್ಡಾಯವಾಗಿದೆ.**

ಎ) ನಿಬಂಧಕರು

ಬಿ) ಸರ್ಕಾರ

ಸಿ) ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ನಿಯಮಿತ

ಡಿ) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿಯಮಿತ

**3. ಸಹಕಾರ ಸಂಘವು ಗಳಿಸಿದ ನಿವ್ವಳ ಲಾಭದಲ್ಲಿ ಗರಿಷ್ಠ ................. ಮೀರದಂತೆ ಲಾಭಾಂಶವನ್ನು ಸದಸ್ಯರಿಗೆ ಷೇರು ಆಧಾರದ ಮೇಲೆ ಹಂಚಲು ಅವಕಾಶವಿದೆ.**

ಎ) ಶೇ. 12%

ಬಿ) ಶೇ. 15%

ಸಿ) ಶೇ. 20%

ಡಿ) ಶೇ. 25%

**4. ಸಹಕಾರ ಸಂಘವು ಗಳಿಸಿದ ನಿವ್ವಳ ಲಾಭದಲ್ಲಿ ಸಹಕಾರ ಶಿಕ್ಷಣ ನಿಧಿಗೆ ಶೇಕಡಾ ................. ರಷ್ಟನ್ನು (ಪಟ್ಟಣ ಬ್ಯಾಂಕ್ ಹೊರತುಪಡಿಸಿ) ಹಂಚಿಕೆ ಮಾಡುವುದು ಕಡ್ಡಾಯವಾಗಿದೆ.**

ಎ) ಶೇ. 1%

ಬಿ) ಶೇ. 2%

ಸಿ) ಶೇ. 3%

ಡಿ) ಶೇ. 5%

**5. ಸಹಕಾರ ಸಂಘದಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಆಡಳಿತ ಮಂಡಲಿ ಸದಸ್ಯರು ............ ರವರ ವಿರುದ್ಧ ಮಂಡಿಸಬಹುದು.**

ಎ) ಮುಖ್ಯ ಕಾರ್ಯನಿರ್ವಾಹಕ

ಬಿ) ಸಿಬ್ಬಂದಿ

ಸಿ) ಅಧ್ಯಕ್ಷರು ಮತ್ತು ಉಪಾಧ್ಯಕ್ಷರು

ಡಿ) ಪದಾಧಿಕಾರಿಗಳು

**6. ಹೊಸದಾಗಿ ನೊಂದಣಿಯಾದ ಸಹಕಾರ ಸಂಘದ ಪ್ರಥಮ ಸಾಮಾನ್ಯ ಸಭೆಯನ್ನು ನೊಂದಣಿ ದಿನಾಂಕದಿಂದ ................. ದಿವಸಗಳೊಳಗಾಗಿ ನಡೆಸತಕ್ಕದ್ದು.**

ಎ) 15 ದಿವಸಗಳು

ಬಿ) 10 ದಿವಸಗಳು

ಸಿ) 30 ದಿವಸಗಳು

ಡಿ) 21 ದಿವಸಗಳು

**7. ಸಹಕಾರ ಸಂಘದ ಸಿಬ್ಬಂದಿಯನ್ನು ನೇಮಕಮಾಡುವ ಹಾಗೂ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವ ಅಧಿಕಾರ ............... ದತ್ತವಾಗಿರುತ್ತದೆ.**

ಎ) ಅಧ್ಯಕ್ಷರು

ಬಿ) ಮುಖ್ಯ ಕಾರ್ಯನಿರ್ವಾಹಕರು

ಸಿ) ಆಡಳಿತ ಮಂಡಲಿ

ಡಿ) ಸಾಮಾನ್ಯ ಸಭೆ

**8. ಸಹಕಾರ ಸಂಘವು ಸರ್‌ಚಾರ್ಜ್ ಪ್ರಕರಣವನ್ನು ............. ವಿರುದ್ಧ ಹೂಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ.**

ಎ) ಪದಾಧಿಕಾರಿಗಳು

ಬಿ) ಮಂಡಲಿ ನಿರ್ದೇಶಕರು

ಸಿ) ಅಧಿಕಾರಿ/ನೌಕರರು

ಡಿ) ಮೇಲಿನ ಎಲ್ಲವು

**9. ಸಹಕಾರ ಸಂಘದಲ್ಲಿ ಸದಸ್ಯತ್ವ ಅಂತ್ಯವಾಗುವಿಕೆ ................ ಸಂದರ್ಭದಲ್ಲಿ.**

ಎ) ಮರಣಹೊಂದಿದಾಗ

ಬಿ) ರಾಜೀನಾಮೆ ನೀಡಿದಾಗ

ಸಿ) ಅನರ್ಹತೆ, ಅಂತ್ಯವಾಗುವಿಕೆ ಅಥವಾ ಆತನ ಷೇರು ವರ್ಗಾವಣೆಯಾದಾಗ

ಡಿ) ಮೇಲಿನ ಎಲ್ಲವು

**10. ಸಹಕಾರ ಸಂಘಗಳ ಸಹಕಾರ ಕಾಯ್ದೆನಿಯಮ ಉಪವಿಧಿ ನಿಬಂಧಕರ ಆದೇಶ ನಿರ್ದೇಶನಗಳನ್ನು ಉಲ್ಲಂಘಿಸಿದಾಗ ಅಪರಾಧಗಳು ಮತ್ತು ದಂಡನೆಗಳಿಗೆ ಗುರಿಪಡಿಸುವ ಸಂಬಂಧಿಸಿದ ಕಲಂ ................ ಆಗಿರುತ್ತದೆ.**

ಎ) ಕಲಂ–108 ಬಿ) ಕಲಂ–110

ಸಿ) ಕಲಂ–109 ಡಿ) ಕಲಂ–108–ಎ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -C , 2 -C , 3 –B , 4 –B, 5 – B, 6 – C, 7 – B, 8 – B, 9 –C , 10 – D